# ತ್ರಿವೇಣಿ

(ಮೂವರು ಮಹಾನ್ ಸಾಯಿ ಪ್ರಚಾರಕರು)





ಶ್ರೀ ನರಸಿಂಹ ಸ್ವಾಮಿಜಿ



ಶ್ರೀ ರಾಧಾಕೃಷ್ಣ ಸ್ವಾಮಿಜಿ



ಶ್ರೀ ಶಿವನೇಶನ್ ಸ್ವಾಮಿಜಿ


ಇಂಗ್ಲಿಷ್ ಮೂಲ : ಡಾ. ಜಿ.ಆರ್. ವಿಜಯಕುಮಾರ್

ಕನ್ನಡ ಅನುವಾದ : ಶ್ರೀ ಸಿ.ಎಸ್. ದಿನೇಶ್, ಮುಂಬೈ

# ತ್ರಿವೇಣಿ

## ಶ್ರೀ ಸಾಯಿನಾಥರ ಮೂವರು ಭಕ್ತ ಶಿರೋಮಣಿಗಳ ಕಿರು ಪರಿಚಯ

ಶ್ರೀ ನರಸಿಂಹ ಸ್ವಾಮಿ
ಶ್ರೀ ರಾಧಾಕೃಷ್ಣಸ್ವಾಮಿ
ಶ್ರೀ ಶಿವನೇಶನ್ ಸ್ವಾಮಿ

ಇಂಗ್ಲಿಷ್ ಮೂಲ:
**ಡಾ. ಜಿ.ಆರ್. ವಿಜಯಕುಮಾರ್**

ಕನ್ನಡ ಅನುವಾದ:
**ಸಿ.ಎಸ್. ದಿನೇಶ್,** ಮುಂಬೈ

ಪ್ರಕಾಶಕರು

***'THREE SAI PRACHARAKS: TRIVENI': Sri Narasimha Swamiji, Sri Radhakrishna Swamiji, Sri Sivanesan Swamiji' -*** is a compilation of life sketches of three ardent devotees of Sri Shirdi Sai Baba. Compiled by Dr. Sri G.R. Vijayakumar. (Rendered into Kannada by Sri C.S. Dinesh, Mumbai)

Published by :

First Edition : 2020

Price : Sai Seva

Printed by : Samskruthi Printers, Mysore

ಓಂ ಶ್ರೀ ಗಣೇಶಾಯ ನಮಃ
ಶ್ರೀ ಸದ್ಗುರು ಸಾಯಿನಾಥಾಯ ನಮಃ



## ಈ ಕಿರು ಹೊತ್ತಿಗೆಯ ಅವಶ್ಯಕತೆಯಾದರೂ ಏಕೆ?

ನಮ್ಮ ಭಾರತ ದೇಶ 'ಸರ್ವೇಜನ ಸುಖೀನೋ ಭವಂತು' ಎನ್ನುವ ಪ್ರೇಮ ಸಂದೇಶ ಸಾರುವ ಸಮುದಾಯದ ಏಕೈಕ ನಾಡು. ಯುಗ ಯುಗಾಂತರಕ್ಕೆ ವಿಶ್ವದ ಜನತೆಗೆ ಪ್ರೇಮ ಸಂದೇಶ ನೀಡುವ ಹಾಗೂ ವಿಶ್ವಕ್ಕೆ ಹಿಂದು ಸಿಖ್ ಜೈನ ಬೌದ್ಧ ಧರ್ಮಗಳನ್ನು ನೀಡಿ ಯಹೂದಿ ಕ್ರೈಸ್ತ, ಇಸ್ಲಾಂ ಮತ್ತು ಪರ್ಷಿಯನ್ ಧರ್ಮಗಳ ಜನಗಳನ್ನು ಪ್ರೇಮದಿಂದ ನೆಲಸಲು ಬೀಡು ಮಾಡಿಕೊಟ್ಟ ಸೌಹಾರ್ದತೆ ಉಳ್ಳ ರಾಷ್ಟ್ರ. ಇದನ್ನು ಪುಣ್ಯಭೂಮಿ ಎಂದೂ ಕರೆಯುತ್ತಾರೆ. ಆನೇಕ ಸಿದ್ಧ ಪುರುಷರು ಪುಣ್ಯ ಜೀವನ ನಡೆಸಲು ವಿಶ್ವದ ಎಲ್ಲ ಧರ್ಮಗಳ ಜನಗಳಿಗೆ ಸಮಯ ಸಮಯಕ್ಕೆ ಅನುವು ಮಾಡಿಕೊಟ್ಟ ಭೂಮಿ.

ಸಾಯಿನಾಥ ಅವತರಿಸಿ ಜನಗಳಿಗೆ ಸೌಹಾರ್ದತೆಯ ಜೀವನ ನಡೆಸಲು ಪ್ರೇಮ ಸಂದೇಶ ನೀಡಿದ ಜಾಗ. ಎರಡು ವರ್ಷಗಳ ಹಿಂದೆ ಸಾಯಿನಾಥರ ಸಮಾಧಿಯ ಶತಮಾನ ಮಹೋತ್ಸವವನ್ನು ನೆರವೇರಿಸ ಲಾಯಿತು. ಇವರಿಂದ ಪ್ರೇರಿತರಾದ ಕೋಟ್ಯಂತರ ಭಕ್ತರು ಒಂದು ಅತ್ಯುತ್ತಮ ಜೀವನ ನಡೆಸುತ್ತಿದ್ದಾರೆ.

ಸಾಯಿನಾಥರ ಹೆಸರು ತಿಳಿಯದ ವ್ಯಕ್ತಿಗಳಿಲ್ಲ. ಆದರೆ ಬಹಳ ಕಾಲ ಇವರ ಹೆಸರನ್ನು ದೇಶದ ಬಹುಭಾಗಗಳಲ್ಲಿ ಯಾರೂ ತಿಳಿದಿರಲಿಲ್ಲ. ಕೇವಲ ಮಹಾರಾಷ್ಟ್ರದ ಜನ ಇವರ ಬಗ್ಗೆ ತಿಳಿದಿದ್ದರು. ಎಲ್ಲರಿಗೂ ಇವರ ವಿಷಯ ತಿಳಿಸಿದ ಶ್ರೇಯ ಮೂವರು ಮಹಾತ್ಮರಿಗೆ ಸೇರುವುದು. ಅವರೇ ಶ್ರೀ ನರಸಿಂಹ ಸ್ವಾಮೀಜಿ, ಶ್ರೀ ರಾಧಾಕೃಷ್ಣ ಸ್ವಾಮೀಜಿ ಹಾಗೂ ಶ್ರೀ ಶಿವನೇಶನ್ ಸ್ವಾಮೀಜಿ. ಇವರುಗಳ ಪ್ರಚಾರದಿಂದಾಗಿ ಬಾಬಾ ಎಲ್ಲರ ಮನೆಗಳಲ್ಲಿ ಭಕ್ತಾದಿಗಳ ನಿತ್ಯದ ಮಾತುಗಳಲ್ಲಿ ಹೃದಯಗಳಲ್ಲಿ ನೆಲೆಸಿದ್ದಾರೆ. ಮೌನವಾಗಿ ಕೆಲಸ ನಿರ್ವಹಿಸುತ್ತ ಈ ಮೂವರು ತಮ್ಮ

ಕಾರ್ಯಗಳಲ್ಲಿ ಯಶಸ್ವಿಯಾದರು. ಈಗ ದಿನವೂ ಲಕ್ಷಾಂತರ ಭಕ್ತರು ಶಿರಡಿಗೆ ಧಾವಿಸುತ್ತಾರೆ. ಅದಕ್ಕೆಲ್ಲಾ ಕಾರಣ ಈ ಮೂವರು ಮಹಾತ್ಮರುಗಳಾಗಿದ್ದಾರೆ.

ಈ ಕೃತಿಯಲ್ಲಿ ಡಾ. ವಿಜಯಕುಮಾರರು ಈ ಮಹಾತ್ಮರ ಪರಿಚಯವನ್ನು ತಮ್ಮ ಉನ್ನತ ಶೈಲಿಯ ನುಡಿಗಳಿಂದ ಅಲಂಕರಿಸಿದ್ದಾರೆ. ಇದನ್ನೇ ತಮಿಳು ಭಾಷೆಗೆ ಶ್ರೀ ಮಹದೇವನ್ ಭಾಷಾಂತರಿಸಿರುತ್ತಾರೆ. ಬೆಂಗಳೂರು ಕೇತೋಹಳ್ಳಿಯ ದ್ವಾರಕಾಮಾಯಿ ಸಾಯಿ ಮಂದಿರದಿಂದ ಹೊರ ಬರುತ್ತಿರುವ ಈ ಕೃತಿಯನ್ನು ಕರ್ಣಾಟಕದ ಭಕ್ತರಿಗೆ ತಲುಪಿಸಲು ಶ್ರೀ ಸಾಯಿನಾಥ ರನ್ನು ಕೋರುತ್ತೇವೆ.

ಇದರ ಬೆಲೆ: **ಶ್ರೀ ಸಾಯಿಸೇವೆ.**

## ಮುನ್ನುಡಿ

ತ್ರಿವೇಣಿಯ ಮೂಲಕ ಮೂರು ಮಹಾತ್ಮರ ಪರಿಚಯ ಮಾಡಿಸುವ ಕಾರ್ಯ ನನಗೆ ನೀಡಿ ಶ್ರೀ ಸಾಯಿನಾಥನ ಸೇವೆ ಮಾಡುವ ಅವಕಾಶ ದೊರಕಿತೆಂದು ಅತ್ಯಂತ ಸಂತಸವಾಗುತ್ತಿದೆ.

ಮನುಷ್ಯಜೀವಿ, ದೇಹ ಮತ್ತು ಚೈತನ್ಯದ ಮಿಲನ ಎಂದು ಗೀತೆಯ ಹದಿಮೂರನೆಯ ಅಧ್ಯಾಯದಲ್ಲಿ ವಿವರಿಸಲಾಗಿದೆ. ಅಧ್ಯಾತ್ಮದ ತಿಳಿವಿಲ್ಲದೆ ನಾವು ಎಲ್ಲವೂ ಕ್ಷೇಮದಿಂದಿದ್ದರೂ ಏನೋ ಕೊರತೆ ಹೇಳಿಕೊಂಡು ಗೋಳಾಡುತ್ತಿರುತ್ತೇವೆ. ಇದರ ಕಾರಣ ದೇಹದ ಬಗ್ಗೆಯೇ ಯೋಚಿಸುವ ನಮ್ಮ ಪ್ರಕೃತಿ. ಮಹಾತ್ಮರ ಚರಿತ್ರೆಗಳನ್ನು ಸತತವಾಗಿ ಓದುತ್ತಿದ್ದಲ್ಲಿ ನಮ್ಮಲ್ಲಿ ಈ ನ್ಯೂನತೆ ಅಳಿಸಿ ನಾವು ಬುದ್ಧಿಜೀವಿಗಳಾಗುತ್ತೇವೆ.

ಪೂಜ್ಯ ರಾಧಾಕೃಷ್ಣ ಸ್ವಾಮೀಜಿ "ನಾನು ನಿನ್ನಲ್ಲಿದ್ದೇನೆ, ನೀನು ನನ್ನಲ್ಲಿದ್ದೀಯೆ" ಎಂಬ ಮಾತನ್ನು ನಮ್ಮ ತಲೆಯಲ್ಲಿ ತುಂಬುತ್ತ ನಮ್ಮನ್ನು ಆಧ್ಯಾತ್ಮಿಕದ ಮಾರ್ಗಕ್ಕೆ ಎಳೆದರು. ಅವರಿಂದ ಪ್ರೇರಿತರಾಗಿ ಸಹಸ್ರಾರು ಜನ ಶ್ರೀ ವಿಷ್ಣು ಸಹಸ್ರನಾಮದ ಪಠಣ ಮಾಡುತ್ತ ತಮ್ಮ ಜೀವನಶೈಲಿಯಲ್ಲಿ ಮಾರ್ಪಾಡು ಕಂಡುಕೊಂಡರು ಹಾಗೂ ಜೀವನದಲ್ಲಿ ಆಗಬಹುದಾದ ದುರಂತಗಳಿಂದ ಮುಕ್ತರಾದರು. ಶ್ರೀ ಶಿವನೇಶನ್ ಸ್ವಾಮೀಜಿ ನಾಮ ಜಪರೂಢಿ ಮಾಡಿಸಿ ಅನೇಕ ಭಕ್ತರಿಗೆ ಮಾರ್ಗದರ್ಶನ ನೀಡುತ್ತ ತಮ್ಮ ಜೀವನ ಸವೆಸಿದರು.

ಬಾಬಾ ಒಂದು ಗೋಡೆಯ ಮಗ್ಗುಲಲ್ಲಿ ನಿಂತು ತಮ್ಮ ಕರುಳನ್ನು ಹೊರತೆಗೆದು, ಒಗೆದು ಒಣಗಲು ಬಿಸಿಲಿಗೆ ಹಾಕಬಲ್ಲವರಾಗಿದ್ದರು. ಇದನ್ನು ಯೌಗಿಕ ಕ್ರಿಯೆಗಳಲ್ಲಿ 'ಧೋತಿ ಪೋತಿ' ಎನ್ನುತ್ತಾರೆ. ಮೇಲೆ ಚಿಂದಿಗಳಿಂದ ನೇತಾಡುತ್ತಿದ್ದ ಹಲಗೆಯ ಮೇಲೆ ಬಾಬಾ ಆರಾಮವಾಗಿ ಮಲಗಿದ್ದು, ನಾಲ್ಕು ಕೋಣೆಗಳಲ್ಲಿ ಹಣತೆಗಳು ಉರಿಯುತ್ತಿದವು. ಅಲ್ಲಿಗೆ ಹೇಗೆ ಹತ್ತುತ್ತಾರೆ ಅಥವಾ ಅಲ್ಲಿಂದ ಹೇಗೆ ಇಳಿಯುತ್ತಾರೆ ಎಂಬ ಸುಳಿವು ಅವರ ಜೊತೆಯಲ್ಲಿ ಕಾಲ ಕಳೆದವರಿಗೂ ತಿಳಿಯದಾಗಿತ್ತು. ಆದರೆ ಇದರಿಂದ ತೂಕವೇ ಇಲ್ಲದ ಆಕೃತಿಯಿಂದ ಕೂಡಿದ ಪರಬ್ರಹ್ಮ ನೆಂದು ಯಾರಾದರೂ ಗ್ರಹಿಸಬಹುದಾಗಿತ್ತು.


ಆಧ್ಯಾತ್ಮಿಕ ಸತ್ಯದ ಹುಡುಕುವಿಕೆಯಲ್ಲಿ ಶ್ರೀ ನರಸಿಂಹ ಸ್ವಾಮೀಜಿ, ಶ್ರೀ ರಾಧಾಕೃಷ್ಣ ಸ್ವಾಮೀಜಿ, ಶ್ರೀ ಶಿವನೇಶನ್ ಸ್ವಾಮೀಜಿ ಎರಡು ನಾಣ್ಯಗಳನ್ನು ತೆಗೆದುಕೊಂಡು ಬಾಬಾರ ಶ್ರದ್ಧೆ ಸಬೂರಿಯ ಮಹತ್ವ ವನ್ನು ಭಕ್ತರಲ್ಲಿ ಮೂಡಿಸಲು ಶ್ರಮಿಸಿದರು. ಇದರಿಂದ ನಾಣ್ಯದ ಮೌಲ್ಯ ಬಿಟ್ಟು ಭಕ್ತರು ಶ್ರದ್ಧೆ ಸಬೂರಿಯ ಸಾಂಕೇತಿಕ ಮಹತ್ವವನ್ನು ಅರಿಯು ವಂತಾಗಿತ್ತು.

Shradda happens after a devotees experiences the faith he/she has on what is impossible in materialistic world .That is cristalization of belief while saburi is sublimation of this crystal called Shradda. once a devotee reaches stage of saburi there is no way to go back in Atma sakshatkara.A person with saburi has all qualities of STITHA PRAGNA as mentioned in Bhagavdgita.

ಈ ಕೃತಿಯನ್ನು ಹೊರತರುವುದರ ಹಿನ್ನೆಲೆ ಬಹಳ ಮಹತ್ವದ್ದಾಗಿದೆ. ಈ ಕಾರ್ಯದಲ್ಲಿ ಮಂದಿರದ ಆಧಿಕಾರಿಗಳಿಗೆ ಸಂಪೂರ್ಣ ಯಶಸ್ಸು ಲಭಿಸಲಿ ಎಂದು ಶ್ರೀ ಸಾಯಿನಾಥರನ್ನು ಮತ್ತು ಅವರ ಅವಿಚ್ಛಿನ್ನ ಭಕ್ತರುಗಳಾದ ಶ್ರೀ ನರಸಿಂಹ ಸ್ವಾಮೀಜಿ ಶ್ರೀ ರಾಧಾಕೃಷ್ಣ ಸ್ವಾಮೀಜಿ ಹಾಗೂ ಶ್ರೀ ಶಿವನೇಶನ್ ಸ್ವಾಮೀಜಿಯವರನ್ನೂ ಪ್ರಾರ್ಥಿಸುತ್ತೇನೆ,

***ಡಾ ವಿಜಯ ಕುಮಾರ್***

**ಡಾ. ವಿಜಯಕುಮಾರ್ ರವರ ಕಿರು ಪರಿಚಯ**



ಇವರ ಜನ್ಮ 1949. 1977ರಿಂದ ಸಾಯಿ ಭಕ್ತರಿಗೆ ಇವರ ಪರಿಚಯವಿದೆ. ಸಾಯಿ ಪತ್ರಿಕೆಗಳಲ್ಲಿ ಕಂಡು ಬರುವ ಲೇಖನಗಳಿಂದ, ಕವಿತೆಗಳಿಂದ ಇವರು ಸಾಯಿ ಆಧ್ಯಾತ್ಮಿಕ ಕೇಂದ್ರದ ಚಟುವಟಿಕೆಗಳಲ್ಲಿ ನಿರಂತರವಾಗಿ ಭಾಗವಹಿಸಿ ಮಾಡುತ್ತಿದ್ದ ನಿಸ್ವಾರ್ಥ ಸೇವೆಯಿಂದ ಸಾಯಿ ಪ್ರೇಮಿಗಳಿಗೆ ಇವರಿಂದಾಗಿರಬಹುದಾದ ಸ್ನೇಹ ಬಾಂಧವ್ಯವನ್ನು ಪದಗಳಲ್ಲಿ ಹೇಳಲಸಾಧ್ಯ. ಇವರಿಗೆ ಪೂಜ್ಯ ಶ್ರೀ ರಾಧಾಕೃಷ್ಣ ಸ್ವಾಮಿಗಳಿಂದ ಹಲವಾರು ದಶಕಗಳಿಂದ ಮಾರ್ಗದರ್ಶನ ಲಭ್ಯವಾಗಿದೆ. ಇವರು 1977 ರಿಂದ ನಿರಂತರ 2016ರ ವರೆವಿಗೂ ತ್ಯಾಗರಾಜ ಮಂದಿರಕ್ಕೆ ತಮ್ಮ ಸೇವೆ ಸಲ್ಲಿಸಿದ್ದಾರೆ. ಇವರ ಗ್ರಂಥ 'ಶ್ರೀ ನರಸಿಂಹ ಸ್ವಾಮೀಜಿಯವರ ಆತ್ಮ ಚರಿತ್ರೆ' 13 ಭಾಷೆಗಳಲ್ಲಿ ಪ್ರಕಟವಾಗಿದೆ. ಇವರದೇ ಇನ್ನೊಂದು ಕೃತಿ 'ಲೋವಿಂಗ್ ಗಾಡ್' ನವದೆಹಲಿಯ ಸ್ಟರ್ಲಿಂಗ್ ಪ್ರಕಾಶನದವರಿಂದ ಬಿಡುಗಡೆಯಾಗಿದ್ದು, 4 ಲಕ್ಷ ಪ್ರತಿ ಭಕ್ತರ ಕೈ ಸೇರಿದೆ. ಇದು ಕನ್ನಡದಲ್ಲಿ 'ಒಲುಮೆಯ ಭಗವಂತ' ಎಂಬ ಹೆಸರಿನಿಂದ ಹೊರಬಂದಿದೆ. ಇವರೇ ಬರೆದಿರುವ ಶ್ರೀ ರಾಧಾಕೃಷ್ಣ ಸ್ವಾಮೀಜಿಯವರ ಆತ್ಮಕಥೆ 'ಎ ಪ್ರೊಫೈಲ್ ಆಫ್ ಗ್ರೇಟ್‌ನೆಸ್' ಭಕ್ತರ ಕೈ ಸೇರಿದೆ. ಇವರಿಗೆ ಆತ್ಮೀಯ ಸಂಬಂಧ ಶ್ರೀ ಶಿವನೇಶನ್ ಸ್ವಾಮೀಜಿಯವರ ಹತ್ತಿರ ಕೂಡ ಇತ್ತು. ಇವರು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಸುಮಾರು 23 ಪುಸ್ತಕಗಳನ್ನು ಬರೆದಿರುತ್ತಾರೆ. 2000 ಕ್ಕೂ ಹೆಚ್ಚು ಲೇಖನಗಳನ್ನು ಬರೆದಿರುತ್ತಾರೆ.

ಬೆಂಗಳೂರು ವಿ.ವಿ.ಯಿಂದ ಎಮ್‌ಬಿಬಿಎಸ್ ಮತ್ತು ಎಂ.ಡಿ. ಪದವಿ ಹೊಂದಿರುತ್ತಾರೆ. P G Diploma in Nutrition and Industrial Health ಪಡೆದಿರುತ್ತಾರೆ. ಶ್ರೀಲಂಕೆಯ ಡಾಕ್ಟೊರಲ್ ಡಿಗ್ರಿ ಇದೆ. ಅಶೋಕ ಲೇಲಾಂಡ್‌ನಲ್ಲಿ ಕೆಲಸ ಮಾಡಿ ನಿವೃತ್ತರಾಗಿರುತ್ತಾರೆ. ರಾಜೀವ ಗಾಂಧಿ ಹೆಲ್ತ್ ಇನ್ಸ್ಟಿಟ್ಯೂಟ್‌ನಲ್ಲಿ ಪ್ರೊಫೆಸರ್ ಆಗಿ ಕೆಲಸ ಮಾಡುತ್ತಿದ್ದಾರೆ. ಆನರಬಲ್ ಪ್ರಿನ್ಸಿಪಾಲ್ & ಆಲ್ ಇಂಡಿಯಾ ಇನ್ಸ್‌ಟಿಟ್ಯೂಟ್ ಆಫ್


ಲೋಕಲ್ ಸೆಲ್ಫ್ ಗೌರ್ನಮೆಂಟ್ ಆಗಿರುತ್ತಾರೆ.

ಇವರಿಗೆ ಸರ್ಕಾರ ರಾಷ್ಟ್ರ ವಿಭೂಷಣ ಗೌರವಾನ್ವಿತ ಪ್ರಶಸ್ತಿಯನ್ನು 2015ರಲ್ಲಿ NCERT ನೀಡಿದೆ. International award USAID for AIDS prevention and president Gold medal award for donating blood for 107 times during period from 1988 to 2007 when he was editing corporate house journal 'Ashley News'.

**'ಸಾಯಿಪಾದಾನಂದ'**ದ ಎಕ್ಸಿಕ್ಯುಟಿವ್ ಎಡಿಟರ್ 1986ರಿಂದ 2016ರ ತನಕ ಆಗಿದ್ದರು. ಪ್ರಪಂಚದ ಎಲ್ಲಾ ಭಾಗಗಳಲ್ಲೂ ಸುತ್ತಿ ಬಂದಿದ್ದಾರೆ. ಯುವಕರಿಗೆ ತರಬೇತಿ ನೀಡುವುದು ಇವರಿಗೆ ಆನಂದದ ಕೆಲಸ.

ಇವರ ಧರ್ಮ ಪತ್ನಿ ಶ್ರೀಮತಿ ಸೀತ 2010 ರಲ್ಲಿ ಅಗಲಿ ಸಾಯಿ ಪಾದ ಸೇರಿದರು. ಇವರ ಇಬ್ಬರು ಮಕ್ಕಳು ಸಾಯಿ ರಘು, ಸಾಯಿ ಪ್ರಭು ಸಾಫ್ಟ್‌ವೇರ್ ಇಂಜಿನಿಯರ್ಸ್. ಸಾಯಿಬಾಬಾರ ಕೆಲಸ ಮಾಡುವುದೇ ಇವರಿಗೆ ಆನಂದ ತರುತ್ತಿರುವ ಕಾರ್ಯ.

## ಶ್ರೀ ಪುಟ್ಟಣ್ಣ



ಶ್ರೀ ಪುಟ್ಟಣ್ಣ (ಕೆ.ಎಸ್. ನಾಗರಾಜರಾವ್) ಅವರ ಆಶೀರ್ವಾದ ದಿಂದ ಈ ಕೃತಿ ಹೊರಗೆ ಬರುತ್ತಿದೆ.

ಶ್ರೀ ಪುಟ್ಟಣ್ಣ ಅವರಿಗೆ ಈಗ 92 ವರ್ಷ ವಯಸ್ಸು. ಪೂಜ್ಯ ನರಸಿಂಹ ಸ್ವಾಮಿ ಮತ್ತು ಶ್ರೀ ರಾಧಾಕೃಷ್ಣ ಸ್ವಾಮಿ ಅವರನ್ನು ನೋಡಿದ ಕೆಲವೇ ಭಕ್ತರಲ್ಲಿ ಇವರೊಬ್ಬರು. ಶ್ರೀ ಪುಟ್ಟಣ್ಣನವರ ಸೋದರ ಮಾವ ಎಂ. ಸುಬ್ಬರಾಮಯ್ಯ ಇವರನ್ನು ಶ್ರೀ ರಾಧಾಕೃಷ್ಣ ಸ್ವಾಮಿಯವರಿಗೆ 1953 ರಲ್ಲಿ ಪರಿಚಯ ಮಾಡಿಸಿದರು.

ಇವರು ಮೆಟ್ರಿಕ್ಯುಲೇಶನ್ ಮಾಡಿ ಸಿಲ್ಕ್ ಬೋರ್ಡ್ ಆಫ್ ಇಂಡಿಯದಲ್ಲಿ ಗುಮಾಸ್ತರಾಗಿ ಸೇರಿದರು. ಶ್ರಮದಿಂದ ಮುಂದೆ ಬಂದು ಆಫೀಸರ್ ಆಗಿ ಹೆಸರು ಪಡೆದರು. ಇವರು ಬಡವರಿಗೆ ಸಹಾಯ ಮಾಡುವುದರಲ್ಲಿ ಮುಂದಿದ್ದು ಇವರನ್ನು ಸಂತ ಎಂದು ಅವರುಗಳು ಭಾವಿಸಿದ್ದರು. ಇವರು ತಮ್ಮ ಕೆಲಸ ಕಾರ್ಯದ ಸಮಯದಲ್ಲಿ ಬಹಳ

ದಕ್ಷರಾಗಿ ಸೇವೆ ಸಲ್ಲಿಸುತ್ತ ನಿಷ್ಠೆಗೆ ತಕ್ಕ ಹೆಸರು ಗಳಿಸಿದ್ದರು. ನರಸಿಂಹ ಸ್ವಾಮಿಯವರ ಜೊತೆ ಪ್ರಚಾರ ಕಾರ್ಯದಲ್ಲಿ ಪಾಲ್ಗೊಂಡರು.


ಮುಂಬಯಿನಲ್ಲಿ ಕೆಲವು ಕಾಲ ಕಳೆದರು. ಆಗ ಇವರ ಸಂಪರ್ಕ ಶ್ರೀ ರಾಧಾಕೃಷ್ಣಸ್ವಾಮಿಯವರ ಜೊತೆ ಒದಗಿ ಬಂತು. 1986ರಲ್ಲಿ ನಿವೃತ್ತಿಯಾದ ಮೇಲೆ ತ್ಯಾಗರಾಜನಗರದಲ್ಲಿ ತಂಗಿದರು. ಆಗ ಇವರಿಗೆ ಸಾಯಿಸೇವೆ ಮಾಡುವ ಸೌಭಾಗ್ಯವೂ ಕೂಡಿಬಂತು. ಇವರು ಸಾಯಿಯನ್ನು ಹುಡುಕುವ ಪ್ರಯಾಸ ಮಾಡಲಿಲ್ಲ. ಬಾಬಾರೇ ಇವರ ಬಳಿಗೆ ಶ್ರೀ ರಾಧಾಕೃಷ್ಣಸ್ವಾಮಿಯವರ ರೂಪದಲ್ಲಿ ಬಂದರು. ತಮ್ಮ ಪ್ರಯಾಸಗಳಲ್ಲಿ ಪಾಲ್ಗೊಳ್ಳಲು ಅವಕಾಶ ನೀಡಿದರು. ಇವರ ಭಜನೆ ಜಪ ಜನಗಳನ್ನು ಆಕರ್ಷಿಸುತ್ತಿತ್ತು. ಇವರನ್ನು ಪುಟ್ಟಣ್ಣ ಗುರೂಜಿ ಎಂದು ಕರೆಯುತ್ತಿದ್ದರು. ದಿನವೂ ಪಾರಾಯಣ ಮಾಡುತ್ತಿದ್ದರು. ಇವರಿಗೆ ಅನೇಕ ಸಿದ್ಧಿಗಳಿದ್ದರೂ ಪ್ರದರ್ಶನ ಮಾಡಲಿಲ್ಲ.

ಭಕ್ತರಿಗೆ ಲಲಿತಾ ಸಹಸ್ರನಾಮ, ಸಾಯಿ ಜಪ, ಓಮ್ ಸಾಯಿ ಶ್ರೀಸಾಯಿ ಜೈ ಜೈ ಸಾಯಿ ಲಿಖಿತ ಜಪ ಮತ್ತು ಜಪ ಅಭ್ಯಾಸ ಮಾಡಿಸುತ್ತಿದ್ದರು. ಅನೇಕ ಮಹಿಳೆಯರನ್ನೂ ಪುರುಷರನ್ನೂ ಭಕ್ತಿ ಮಾರ್ಗಕ್ಕೆ ತಂದ ಶ್ರೇಯಸ್ಸು ಇವರಿಗೆ ಸೇರುತ್ತದೆ. ಇವರು ಕಾಲೇಜಿನ ಪ್ರಭಾವದಿಂದ ಹೆಸರು ಗಳಿಸದೆ ತಮ್ಮ ಶ್ರಮದಿಂದ ಸುಮಾರು 15 ಕನ್ನಡ ಪುಸ್ತಕ ಬರೆದಿರುತ್ತಾರೆ. ಇವರು ಭಾಷಣಕಾರರಲ್ಲದಿದ್ದರೂ ಆಡುವ ಮಾತಿನಲ್ಲಿ ಶ್ರೋತೃಗಳನ್ನು ಆಕರ್ಷಿಸುವ ಭಕ್ತಿರಸ ತುಂಬಿರುತ್ತದೆ.

2004 ರಲ್ಲಿ ಸಾಯಿಪಾದಾನಂದ ಸತ್ಸಂಗ ಸ್ಥಾಪಿಸಿ ಸಾಯಿ ಪ್ರಚಾರ, ನಾಮ ಜಪ, ವಿಷ್ಣು ಸಹಸ್ರನಾಮಗಳನ್ನು ಜನಗಳು ಅಭ್ಯಾಸ ಮಾಡುವಂತೆ ಪ್ರೇರೇಪಿಸಿದರು. ಒಂದು ಕೋಟಿ ಓಮ್ ಸಾಯಿ ಶ್ರೀ ಸಾಯಿ ಜೈ ಜೈ ಸಾಯಿ ಲಿಖಿತ ಜಪ ಭಕ್ತರಿಂದ ಮಾಡಿಸಿ ಮಲ್ಲೇಶ್ವರ ಮಂದಿರಕ್ಕೆ ನೀಡಿದರು. ಮತ್ತೆ ಐದು ಕೋಟಿ ಇದೇ ತರಹ ಜಪ ಬರೆಯಿಸಿ ಕನ್ಯಾಕುಮಾರಿಯಲ್ಲಿ ವಿಸರ್ಜನೆ ಮಾಡಿಸಿದರು. ಒಂಬತ್ತು ಕೋಟಿ ಸಲ ವಿಷ್ಣು ಸಹಸ್ರನಾಮ ಜಪ ದೇಶಾದ್ಯಂತ ಮಾಡಿಸಿದ ಮಹತ್ ಕಾರ್ಯದ ಶ್ರೇಯ ಇವರಿಗೆ ಸಲ್ಲುತ್ತದೆ. 2017ರಲ್ಲಿ ಇವರು ಹಲವಾರು ಬಾರಿ ಶಿರಡಿ ಯಾತ್ರೆ ಕೈಗೊಂಡಿದ್ದಾರೆ. ಬಾಬಾರ ಮತ್ತು ಶ್ರೀ ರಾಧಾಕೃಷ್ಣ ಸ್ವಾಮಿಯವರ ಆಶೀರ್ವಾದಕ್ಕೆ (1953) ಪಾತ್ರರಾಗಿದ್ದಾರೆ. 2014ರಲ್ಲಿ Appendicular Abscess and Peritonitis ಖಾಯಿಲೆಯಾಗಿ ಹೋರಾಡಿ ಬದುಕಿದರು.

ಬನಶಂಕರಿ ಮೂರನೇ ಹಂತದಲ್ಲಿ ಪತ್ನಿಸಮೇತ ನೆಲೆಸಿದ್ದಾರೆ. ಇವರ ಒಬ್ಬನೇ ಮಗ ಸಾಫ್ಟ್‌ವೇರ್ ಇಂಜಿನಿಯರ್ ಆಗಿದ್ದು ಒಬ್ಬ ಮೊಮ್ಮಗ ಇದ್ದಾನೆ.

**ಶ್ರೀ ಸಿ.ಎಸ್. ದಿನೇಶ್**



'ತ್ರಿವೇಣಿ' ಕೃತಿಯನ್ನು ಕನ್ನಡಕ್ಕೆ ಭಾಷಾಂತರಿಸಿರುವ ಶ್ರೀ ಸಿ.ಎಸ್. ದಿನೇಶ್ ಅಸಾಮಾನ್ಯ ಸಾಯಿಭಕ್ತರು. ವೃತ್ತಿಯಲ್ಲಿ ಇಂಜಿನಿಯರ್ ಆಗಿರುವ ಇವರು ಮೂಲತಃ ಕರ್ಣಾಟಕದವರು. ಅವರ ಸೇವೆಯೆಲ್ಲಾ ಹೊರ ದೇಶಗಳಲ್ಲಾಗಿದ್ದು ಈಗ ಮುಂಬೈನಲ್ಲಿ ನೆಲೆಸಿದ್ದಾರೆ. ಇವರು ಉತ್ತಮ ವಾಗ್ಮಿಗಳು ಮತ್ತು ಚಿನ್ಮಯ ಸಂಸ್ಥೆಯ ಕಾರ್ಯಕರ್ತರು. ಭಗವದ್ಗೀತೆ ಮತ್ತು ಸಾಯಿ ಚರಿತ್ರೆಯ ಬಗ್ಗೆ ದೇಶಾದ್ಯಂತ ಪ್ರವಚನ ನೀಡುತ್ತಿರುತ್ತಾರೆ. ಹೇಮಾಡಪಂತರ ಪದ್ಯರೂಪ ಕೃತಿಯನ್ನು ಗದ್ಯರೂಪದಲ್ಲಿ (ಇದರ ಮರಾಠಿ ಮೂಲ ಶ್ರೀ ಪವಾರ್ ಕಾಕಾರದ್ದು) ಇಂಗ್ಲಿಷ್ ಮತ್ತು ಕನ್ನಡ ಭಾಷೆಯಲ್ಲಿ ಹೊರತಂದಿರುತ್ತಾರೆ. ಶ್ರೀ ಸಾಯಿ ಬಾಬಾರ ಬಗ್ಗೆ ಅನೇಕ ಪುಸ್ತಕಗಳನ್ನೂ ಲೇಖನಗಳನ್ನೂ ಬರೆದಿದ್ದಾರೆ. ಸಾಯಿಬಾಬಾರ ಪ್ರಚಾರ ಕ್ಕಾಗಿಯೇ ಮೀಸಲಾಗಿರುವ ತ್ರೈಮಾಸಿಕ 'ಈ–ಮಾಗಜೈನ್' 'ಸಾಯಿ ಔರಾ' ಗೆ ಡಾ. ಶ್ರೀ ವಿಜಯಕುಮಾರರ ಜೊತೆ ಸಹಾಯಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಈಗಾಗಲೇ ಇವರು ಪದ್ಯ ರೂಪದಲ್ಲಿ ಇವರದ್ದೇ ಭಾಷಾಂತರ ಕೃತಿ 'ಒಲುಮೆಯ ಭಗವಂತ' ಹೊರತರಲಿದ್ದಾರೆ.

**ಶ್ರೀ ನಾಗರಾಜನ್ (1960–2018)**



ಶ್ರೀ ನಾಗರಾಜನ್ ಅವರು (ಶ್ರೀ ಸಾಯಿ ನಾಗರಾಜನ್ ಎಂದೇ ಹೆಸರುವಾಸಿ) ಉಡುಮಾಲ ಪೇಟ್ ವಾಸಿ. ಬಹಳವೇ ಗಣ್ಯರಾಗಿ ಬಾಳಿ ಹೆಸರುವಾಸಿಯಾಗಿದ್ದರು. ತಮಿಳು ನಾಡಿನ ಹೆಸರಾಂತ ಸಾಯಿಭಕ್ತರಲ್ಲಿ ಇವರೊಬ್ಬರಾಗಿದ್ದರು. ಸಾಮಾನ್ಯ ಕುಟುಂಬದಲ್ಲಿ ಜನಿಸಿ ಬಹಳ ಸಾಮಾನ್ಯ ರೀತಿಯಲ್ಲಿ ಪ್ರಾಮಾಣಿಕ ಜೀವನವನ್ನು ಭಕ್ತಿ ಮಾರ್ಗದಲ್ಲಿ ನಡೆಸುತ್ತಿದ್ದರು.

ತಮಿಳುನಾಡಿನ ವ್ಯವಸಾಯಿ ಖಾತೆಯಲ್ಲಿ ಕೆಲಸ ಮಾಡುತ್ತ ಸೂಪರಿಂ ಟೆಂಡೆಂಟ್ ಆಗಿದ್ದರು. ಮುವತ್ತೈದು ವರ್ಷ ಕೆಲಸ ಮಾಡಿ 2018 ರಲ್ಲಿ ನಿವೃತ್ತರಾದರು. ಅದೇ ವರ್ಷ ಐವತ್ತೆಂಟರ ವಯಸ್ಸಿನಲ್ಲಿ ಸ್ವಾಮಿಪಾದ ಸೇರಿದರು. ಇವರ ಪತ್ನಿ ಶ್ರೀಮತಿ, ರೇವತಿ ಒಬ್ಬಳು ಮಗಳು ಹಾಗೂ ಒಬ್ಬ ಮಗನಿದ್ದಾನೆ.

ಬಹಳ ಪ್ರಾಮಾಣಿಕ ಹಾಗೂ ಮೇಧಾವಿ ಜೀವಿ. ನಾಮಜಪ ರೂಢಿಯಲ್ಲಿಟ್ಟುಕೊಂಡು ಸಾಯಿ ಸ್ಮರಣೆಯಲ್ಲಿರುತ್ತಿದ್ದರು. ತಮ್ಮ ಭಕ್ತಿ ಪುಷ್ಟೀಕರಿಸಿಕೊಳ್ಳಲು ವೇದಾಂತ ಅಧ್ಯಯನ ಮಾಡಿದ್ದರು. ಇವರ ಸಾಯಿ ಭಕ್ತಿ ಇವರ ಸಂಪರ್ಕದಲ್ಲಿದ್ದವರಿಗೆಲ್ಲಾ ತಿಳಿದಿತ್ತು. ಉಡುಮಾಲ್ ಪೇಟ್‌ನ ಅನಂತ ಸಾಯಿ ಮಂದಿರದ ಉದ್ಘಾಟನೆಯಲ್ಲಿ ಬಹಳ ಶ್ರಮ ವಹಿಸಿ ಕೆಲಸ ಮಾಡಿದ್ದರು. ಆ ಮಂದಿರದ ಚೇರ್‌ಮನ್ ಆಗಿ ತಮ್ಮ ಕೊನೆಯುಸಿರಿನವರೆಗೂ ಐದು ವರ್ಷ ಕೆಲಸ ಮಾಡಿದ್ದರು. ಆ ಪಟ್ಟಣದ ವಾಸಿಗಳಿಗೆಲ್ಲಾ ಸಾಯಿ ಬಗ್ಗೆ ನಿತ್ಯವೂ ಮಾತನಾಡುತ್ತ, ದೊಡ್ಡ ಸಾಯಿ ಭಕ್ತರ ಸಮುದಾಯವನ್ನೇ ಬೆಳೆಸಿದ್ದರು. ಮಂದಿರ ಪೋಷಣೆ ಮಾಡುತ್ತ ನಿರಂತರವಾಗಿ ಶ್ರಮ ವಹಿಸಿ ಭಕ್ತರಿಗೆ ಸಾಯಿ ಚರಣ  ಹಿಡಿಯುವುದಲ್ಲದೆ ಮಾನವನ ಉದ್ಧಾರಕ್ಕೆ ಬೇರೆ ದಾರಿಯಿಲ್ಲ ಎಂದು ತೋರಿಸಿಕೊಟ್ಟರು. ಅಲ್ಲಿಯ ಮಂದಿರದ ಟ್ರಸ್ಟೀಸ್, ಕಾರ್ಯಕರ್ತರು, ಭಕ್ತರು ಎಲ್ಲರ ಸಹಕಾರ ತೆಗೆದುಕೊಂಡು ಇವರೆಲ್ಲರನ್ನೂ ಪ್ರೋತ್ಸಾಹಿಸುತ್ತ ಜೀವನ ನಡೆಸಿದರು ಬೆಂಗಳೂರಿನ ಕೇತೋಹಳ್ಳಿಯ ದ್ವಾರಕಾಮಾಯಿ ಮಂದಿರದ ನಿರ್ಮಾಣದಲ್ಲೂ ಇವರ ಕಾರ್ಯಕೌಶಲ್ಯ ಬಹಳವೇ ಉಪಯೋಗಕಾರಿಯಾಗಿತ್ತು. ಇವರ ನಮ್ರತೆ ಜನಗಳಲ್ಲಿದ್ದ ಮಮತೆ ಇವರ ಯಶಸ್ಸಿನ ಮೂಲವಾಗಿತ್ತು. ಅಲ್ಲಿಗೆ ಅಮೃತಶಿಲೆಯ ಮೂರ್ತಿಯನ್ನು ತರುವುದರಲ್ಲಿ ಇವರ ಉತ್ಸಾಹ, ಭಕ್ತರಿಗೆ ನೀಡುತ್ತಿದ್ದ ಪ್ರೋತ್ಸಾಹ ಅವರ್ಣನೀಯ. ಆದರೆ ಅಲ್ಲಿಯ ಮಂಡಲ ಪೂಜೆಯ ಮೊದಲೇ ಸಾಯಿ ಚರಣ ಸೇರಿದರು.

ನಿವೃತ್ತರಾದ ನಂತರ ಬಹಳ ಸಮಯ ಉಡುಮಾಲ್ ಪೇಟ್ ಮಂದಿರದಲ್ಲಿ ಸಮಯ ಕಳೆಯುತ್ತಿದ್ದರು. ಶಿರಡಿಗೆ ಹಲವಾರು ಬಾರಿ ಹೋಗಿರುತ್ತಾರೆ. ನಮ್ಮ ದೇಹಭಾವ ಕಳೆಯಲು, ಅಹಂಕಾರದಿಂದ ಮುಕ್ತಿ ಪಡೆಯಲು ಭಜನೆಯೇ ಮುಖ್ಯ ಎಂದು ಸಾರುತ್ತಿದ್ದರು. ಅನೇಕ ಭಜನೆಗಳನ್ನು ಭಕ್ತಿ ಪೂರ್ವಕವಾಗಿ ಹಾಡುತ್ತಿದ್ದರು .

ಇವರನ್ನು ನೆನಪಿಸಿಕೊಳ್ಳುವವರಿಗೆ ಮನಸ್ಸಿಗೆ ಬರುವುದು 'ಗುರುವೇ

ಶರಣಮ್'. ಪ್ರತಿನಿತ್ಯ ಇದೇ ಧ್ಯಾನದಲ್ಲಿರುತ್ತಿದ್ದರು. ಅವರ ಮೃತ್ಯು ನಮಗೆಲ್ಲಾ ಅಕಾಲವೆಂದೆನಿಸಿದರೂ ಅವರಿಗೆ ಅದು ಮುಕ್ತಿಯೆಂದರೆ ಸಂದೇಹವಿರಕೂಡದು.

ಓಂ ಸಾಯಿರಾಮ್




मौन०याख्याप्रकटितपरब्रह्मतत्वं युवानं
वर्षिष्ठान्तेवसदृषिगणैरावृतं ब्रह्मनिष्ठैः ।
आचार्येन्द्रं करकलितचिन्मुद्रमानन्दमूर्तिं
स्वात्मारामं मुदितवदनं दक्षिणामूर्तिमीडे ।।

वसुदेवसुतं देवं कंस चाणुरमर्दनम् ।
देवकीपरमानन्दं कृष्णं वन्दे जगद्गुरुम् ।।



सर्वधर्मान्परित्यज्य मामेकं शरणं व्रज ।
अहं त्वा सर्वपापेभ्यो मोक्षयिष्यामि मा शुचः ।।


ஸ்ரீதத்த பரம்பரை
ஸ்ரீதத்தாத்ரேயர்
ஸ்ரீ பாத வல்லபர்
ஸ்ரீ சாய் பாபா
ஸ்ரீ சங்கர்மஹாராஜ்



Kanchi Kamakoti Peetam Sankaracharya Sri Chandrasekarendra Saraswathi Swamigal (Maha Periyava)


TWO SPIRITUAL GIANTS WHO LED SIMPLE LIVES



Sri Shirdi Sai Baba who, based in Shirdi, radiated spirutual bliss.

## ಶ್ರೀ ನರಸಿಂಹ ಸ್ವಾಮಿ

### ವ್ಯಕ್ತಿ ಪರಿಚಯ



ಸ್ವಾಮೀಜಿಯವರು 1923 ರಲ್ಲಿ Self -realization (A Biography of Ramana) ಎಂಬ ಕೃತಿ ಹೊರ ತಂದು ರಮಣರ ಪರಿಚಯವನ್ನು ವಿಶ್ವಕ್ಕೆ ಮಾಡಿಸಿದರು. ಇವರು ಮಾಡಿದ ಶ್ರಮದ ಶೇಕಡಾ 25. 'ಸೇಜ್ ಆಫ್ ಸಕೋರಿ' ಎಂಬ ಪುಸ್ತಕದಿಂದ ಶ್ರೀ ಉಪಾಸಿನಿ ಮಹಾರಾಜರ ಪರಿಚಯವನ್ನೂ 1936 ರಲ್ಲಿ ಇವರೇ ಮಾಡಿಸಿದರು. ಇದರಿಂದ ಇವರ ಶ್ರಮದ ಇನ್ನು ಶೇಕಡಾ 25 ಹೊರ ಬಂದು ಅಧ್ಯಾತ್ಮ ಜಿಜ್ಞಾಸುಗಳಿಗೆ ಉಪಕಾರವಾಯಿತು. ಮಿಕ್ಕಿದ ಶ್ರಮದಿಂದ ಭಕ್ತ ಕೋಟಿಗೇ ಬಹಳ ಉಪಕಾರವಾಯಿತು ಅದು ಮಿಕ್ಕ ಶೇಕಡಾ 50 ಅಗುತ್ತದೆ. ಅದರಲ್ಲಿ ಅವರ ಪ್ರಯಾಣ, ಪ್ರವಚನಗಳು, ಸಾಯಿ ಭಕ್ತರಿಗೆ ಮುಕ್ತಿಧಾಮದ ಕಡೆ ಪಯಣ ಬೆಳೆಸಲು ಪ್ರೇರೇಪಿಸುವ ಕಾರ್ಯಗಳು ತುಂಬಿವೆ.

ಶಿರಡಿಯ ಪೂಜಾರಿಗಳಿಗೆ ವೈದಿಕ ಧರ್ಮದ ಅನುಸಾರ ಪೂಜಾ ವಿಧಿಗಳನ್ನು ಕಲಿಸಿ ವಿಷ್ಣುಸಹ್ರನಾಮದ ಜಪ ಎಲ್ಲರಿಗೂ ಮುಖ್ಯವೆಂದು ಪ್ರಚಾರ ಮಾಡಿದರು.

ಒಮ್ಮೆ 1943 ಜನವರಿ 7ರಂದು ಒಂದು ನಾಗರಾಜ (ಸರ್ಪ) ಇವರೆದುರಿಗೆ ಬಂದು ದರ್ಶನ ನೀಡಿ, ಹತ್ತಿರದಲ್ಲಿದ್ದ ಹುತ್ತಕ್ಕೆ ಹೊರಟು ಹೋಯಿತು. ಶ್ರೀ ಎ.ವಿ.ಕೆ. ಚಾರಿ ಎಂಬುವರ ಶ್ರಮದಿಂದ 1944ರಲ್ಲಿ ನಾಗಸಾಯಿ ಮಂದಿರ ಸ್ಥಾಪಿತವಾಯಿತು. ಇಲ್ಲಿಂದ ತಡೆಯಿಲ್ಲದೆ ಸಾಯಿ ಪ್ರಚಾರ ಕಾರ್ಯಕ್ಕೆ ನಾಂದಿಯಾಯಿತು.

1956 ಅಕ್ಟೋಬರ್ ತಾ. 19ರಂದು ಪೂರ್ಣಿಮೆಯ ದಿನ 3.45 ಕ್ಕೆ ಬೆಳಗಿನ ಸಮಯ ಸಾಯಿಚರಣದಲ್ಲಿ ಲೀನರಾದರು. ಬೆಸೆಂಟ್ ನಗರದ ಸ್ಮಶಾನದಲ್ಲಿ ಅಂತ್ಯಶ್ರೀಕ್ರಿಯೆ ನಡೆದು, ಶ್ರೀ ಓ.ಕೆ. ವರದರಾವ್ ಮತ್ತು ಟಿ. ಕೇಶವರಾವ್ ಇವರುಗಳು ಸ್ವಾಮಿ ಶುದ್ಧಾನಂದರ ನೇತೃತ್ವದಲ್ಲಿ ವಿಧಿಗಳನ್ನು ಪೂರೈಸಿದರು. ಅವರಿಗೆ ಆಗ 82 ವರ್ಷ ಆಗಿದ್ದು ಯಾವ ರೋಗವಾಗಲಿ ಅಥವಾ ಇನ್ಯಾವ ಯಾತನೆಯಾಗಲಿ ಇರಲಿಲ್ಲ.

## ಶ್ರೀ ನರಸಿಂಹ ಸ್ವಾಮೀಜಿ

(21–8–1874 19–10–1956)

ಶಿರಡಿ ಸಾಯಿ ಬಾಬಾರ ಸಂದೇಶ ಭಕ್ತ ಕೋಟಿಗೆ ತಲುಪಿಸಿದ ಸಂತಧೂತ.

ದೇಶದ ಮೂಲೆ ಮೂಲೆಗೆ ಬಾಬಾರ ವಿಷಯ ಪ್ರಚಾರ ಮಾಡಿದವರಲ್ಲಿ ಅಗ್ರಜರು. ಶಿರಡಿಗೆ ಬರುವ ಭಕ್ತರ ಅನುಭವವನ್ನು ಹೇಳುತ್ತಾ ಶಿರಡಿಗೇ ಸೀಮಿತವಾಗಿದ್ದ ವಿಷಯಗಳನ್ನು ಅನ್ಯ ಭಕ್ತರಿಗೆ ತಲುಪಿಸಿದರು. ಶ್ರೀ ಎಂ.ಬಿ. ರೇಗೆ ಇವರ ಚಿತ್ರವನ್ನು ಸಮಾಧಿ ಮಂದಿರ ದಲ್ಲಿ ಹಾಕಿ, ಅವರು ಸಾಯಿ ಪ್ರಚಾರಕ್ಕೆ ಮಾಡಿದ ಶ್ರಮಕ್ಕೆ ಒಂದು ಕಾಣಿಕೆ ರೂಪದಲ್ಲಿ ನೀಡಿದರು.

ನರಸಿಂಹ ಸ್ವಾಮಿಯವರು ಬಾಬಾರ ಸಹಸ್ರನಾಮ ರಚಿಸಲು ಸಂಕಲ್ಪ ಮಾಡಿದ್ದರು. 21–12–1936ರಂದು ಸಾತೇವಾಡ ತಲುಪಿದರು. ಅದೇ ಸಮಯ ದಾಸಗಣು ಅಲ್ಲಿಗೆ ತಲುಪಿ ನರಸಿಂಹ ಸ್ವಾಮಿಗಳಿಗೆ ರಚನೆ ಪ್ರಾರಂಭಿಸಲು ಹೇಳಿ ಧ್ಯಾನಕ್ಕೆ ಕುಳಿತರು. ಸುಮಾರು 4 ಗಂಟೆಗೆ ಧ್ಯಾನದಿಂದ ಹೊರಬಂದರು. ಅಷ್ಟರಲ್ಲಿ ನರಸಿಂಹ ಸ್ವಾಮಿ ನೀವು ಹೇಳಿದ್ದೆಲ್ಲಾ ಬರೆದು ರಚನೆ ಮುಗಿಯಿತೆಂದರು. ಧ್ಯಾನದ ಸಮಯ ಗಣು ಮಹಾರಾಜರು ಮೌನದಲ್ಲಿದ್ದರು. ಹಾಗಿರುವಾಗ ಹೇಳಿದವರಾರು ಕೇಳಿದವರಾರು! ಈಗ ಇಬ್ಬರಿಗೂ ಆಶ್ಚರ್ಯದ ಕಾರಣ ಅರಿವಾಯಿತು ಹೇಳಿದವರೂ ಬಾಬಾ, ಕೇಳಿದವರೂ ಬಾಬಾ, ಬರೆದವರೂ ಬಾಬಾ.

ನರಸಿಂಹ ಸ್ವಾಮಿಯವರು ಅನನ್ಯ ಧೂತರಾಗಿದ್ದರು. ಬಾಬಾರನ್ನು ಬೆಳಕಿಗೆ ತಂದರು. ಅವರು ತಮ್ಮದೇ ವ್ಯಕ್ತಿತ್ವದ ಬಗ್ಗೆ ಬರೆದಿಲ್ಲ ಆದರೆ ಅಲ್ಲಿ ಇಲ್ಲಿ ಆತ್ಮೀಯರಿಂದ ಕೇಳಿದ ಮಾತುಗಳಿಂದ ಈ ಕೆಳಗೆ ನಮೂದಿಸಿರುವ ವಿಷಯ ಹಾಗೂ ಅವರ ವ್ಯಕ್ತಿತ್ವವನ್ನು ಭಕ್ತ ಕೋಟಿಗಳ

ಗಮನಕ್ಕೆ ತರಲಿಚ್ಚಿಸುತ್ತೇನೆ.

ಪ್ರಾರಂಭದಲ್ಲಿ ಅವರು ಬಾಬಾರ ಬಗ್ಗೆ ಪ್ರಕಟಿಸಿದ ಲೇಖನ ಗಳಿಂದ ಮತ್ತು ಬಾಬಾ ಭಕ್ತರ ಅನುಭವಗಳ ಕಥೆಗಳಿಂದ ಬಾಬಾರ ವಿಷಯ ಪ್ರಪಂಚದಲ್ಲಿ ಎಲ್ಲೆಡೆಯೂ ಎಲ್ಲರಿಗೂ ತಿಳಿಯಲು ಅನುಕೂಲವಾಯಿತು. ದೇಶ ವಿದೇಶಗಳಲ್ಲಿ ಭಕ್ತರು ಬಾಬಾರ ವಿಷಯ ತಿಳಿದು ಉತ್ಸಾಹಿತರಾಗಿ ಶಿರಡಿಗೆ ಬರುತ್ತಿದ್ದರು. ಕ್ಯೂಬಾ ಥೈವಾನ್ ಬೆನಿನ್, ರುವಾಂಡ, ಲಿಥುವೇನಿಯ ಎಲ್ಲೆಲ್ಲೂ ಬಾಬಾರ ಹೆಸರು ಬೆಳಕಿಗೆ ಬಂದಿತು. ಸೇಂಟ್ ಮಾರ್ಟಿನ್ ಎಂಬುದು ಕೆರಿಬಿಯನ್ ಸೀ ನಲ್ಲಿ 38000 ಜನರಿರುವ ಸಣ್ಣ ದ್ವೀಪ. ಅಲ್ಲಿ ಜನ ಪ್ರಭಾವಿತರಾದರು. ಎಲ್ಲಾ ಹೊರದೇಶಗಳಲ್ಲೂ ಬಾಬಾ ಭಗವಂತನ ಅವತಾರವೆಂದು ಜನಗಳು ಎರಡನೇ ಯೋಚನೆಯಿಲ್ಲದೆ ನಂಬಿದರು.

ನರಸಿಂಹ ಸ್ವಾಮಿಯವರು 1874ರ ಆಗಸ್ಟ್ 21ರಂದು ಕ್ಯೊಂಬತ್ತೂರನ ಭವಾನಿಯಲ್ಲಿ ಜನಿಸಿದ್ದು. ತಂದೆ ಬಿ. ವೆಂಕಟಗಿರಿ ತಾಯಿ ಅಂಗಾಚಿ ಅಮ್ಮಾಳ್. ಓದಿನಲ್ಲಿ ಬಹಳ ಮುಂದಿದ್ದರು. ಸೇಲಮ್ ನಲ್ಲಿ ಮೆಟ್ರಿಕ್ಯುಲೇಶನ್ ಮಾಡಿ ಮದ್ರಾಸ್ ನಲ್ಲಿ ಬಿ.ಏ., ಬಿ.ಎಲ್. ಮಾಡಿದರು. 1895 ರಲ್ಲಿ ಸೇಲಮ್‌ಗೆ ಬಂದು ಬಾರ್‌ನಲ್ಲಿ ಲಾ ಕೆಲಸ ಮುಂದುವರಿಸಿದರು. ಬಡವರಿಗೆ ತೊಂದರೆಯಾಗದಿರಲೆಂದು ಕೋರ್ಟ್ ಮೆಟ್ಟಲು ಹತ್ತಲು ಕಕ್ಷಿ ದಾರರನ್ನು ಪ್ರೇರೇಪಿಸುತ್ತಿರಲಿಲ್ಲ. ಬಡವರಿಂದ ಸ್ವಲ್ಪವೂ ಖರ್ಚಿಲ್ಲದೆ ಕೇಸ್ ಗಳನ್ನು ಮುಗಿಸಿ ಪ್ರಸಿದ್ದಿಯಾದರು. ಸೇಲಮ್ ಮುನಿಸಿಪಾಲಿಟಿಯ ಚೇರ್‌ಮನ್ ಆದರು. ಇವರು ಪ್ರಸಿದ್ಧಿಯಾಗಿ ಕಕ್ಷಿದಾರರು ಹೆಚ್ಚಾಗಿ ಸಂಪಾದನೆಯೂ ಅಧಿಕವಾಯಿತು. ಪತ್ನಿ ಸೀತಾಲಕ್ಷ್ಮಿಯೂ ಒಳ್ಳೆಯ ಗೃಹಿಣಿಯಾಗಿ ಮಕ್ಕಳೊಂದಿಗೆ ಎಲ್ಲರೂ ಸುಖವಾಗಿದ್ದರು. ಆಕೆಯೂ ಬಡವರಿಗೆ ಸಹಾಯ ಮಾಡಲು ಸದಾ ಮುಂದಿರುತ್ತಿದ್ದರು.

ಅಪಾರ ಆಸ್ತಿ ಸಂಪಾದಿಸಿ ಗೌರವಾನ್ವಿತರಾಗಿ ರಾಜಕೀಯದಲ್ಲೂ ಇವರ ಹೆಸರು ಕೇಳಿ ಬರುತ್ತಿತ್ತು. ತಿಲಕರ ಜೊತೆ ಸಂಬಂಧ ಬೆಳೆದಿತ್ತು. 1912ರಲ್ಲಿ ಇವರನ್ನು ಮದ್ರಾಸ್ ಲೆಜಿಸ್ಲೇಟಿವ್ ಕೌನ್ಸಿಲ್‌ನಲ್ಲಿ ಆರಿಸ ಲಾಯಿತು. 1920ರ ತನಕ ಅಲ್ಲಿದ್ದರು. ಮತ್ತು ತಮಿಳಿನಲ್ಲಿ ಭಾಷಣ ಮಾಡಿದರು. ರಾಜಾಜಿಯವರ ಜೊತೆ ಶ್ರೀ ವಿಜಯರಾಘವಾಚಾರ್ ಜೊತೆ ಸಂಪರ್ಕ ಬೆಳೆಸಿದ್ದರು. ಇಬ್ಬರೂ ಸೇಲಮ್‌ನಲ್ಲಿದ್ದರು. ಇವರ

ಮಾತು ಕೇಳಲು ಜನಗಳು ಬಹು ಸಂಖ್ಯೆಯಲ್ಲಿ ನೆರೆಯುತ್ತಿದ್ದರು.

1921 ರಲ್ಲಿ ನಡೆದ ಪ್ರಾಕೃತಿಕ ಆಕಸ್ಮಿಕ ಆಘಾತದಲ್ಲಿ ಮಗಳು ಸಾವಿತ್ರಿ ಮಗ ಜಯರಾಂ ಆಡುತ್ತಿದ್ದಾಗ ಒಂದು ಭಾವಿಯಲ್ಲಿ ಬಿದ್ದು ಪ್ರಾಣ ತೆತ್ತರು. ಇದಾದ ನಂತರ ಲಾ ಕೆಲಸ ತ್ಯಜಿಸಿ ರಾಜಕೀಯ ಮತ್ತು ಸಾಮಾಜಿಕ ಕಾರ್ಯಗಳನ್ನು ತೊರೆದರು. ಮಿಕ್ಕಗಂಡು ಮಕ್ಕಳು ತಮ್ಮ ಕಾಲಿನ ಮೇಲೆ ನಿಲ್ಲುವಂತೆ ಮಾಡಿ ಹೆಣ್ಣುಮಕ್ಕಳಾದ ರಾಜಲಕ್ಷ್ಮಿ ಶಾರದಾ ಮಾಯಿ ಮದುವೆಯಾಗಿ ನಿಶ್ಚಿಂತರಾಗಿದ್ದರು. ಆಗ ಲಕ್ಷ್ಮಿ ನಾರಾಯಣ ಮಂದಿರದ ಕೆಲಸ ಪೂರ್ತಿ ಮಾಡಿಸಿದರು.

ಹೀಗೆ ತಮ್ಮ ವೃತ್ತಿಯಿಂದ ನಿವೃತ್ತಿ ಪಡೆದು ಸದ್ಗುರುವಿನ ಶೋಧನೆಯಲ್ಲಿ ಕಾಲಿಟ್ಟು ಶೃಂಗೇರಿ ತಲುಪಿದರು. ಪೂಜ್ಯ ಚಂದ್ರಶೇಖರ ಭಾರತಿಗಳ ಆದೇಶದಂತೆ ತಿರುವಣ್ಣಾಮಲೈನ ರಮಣರ ಹತ್ತಿರ ಬಂದರು.

ಅವರು ರಮಣರ ಮುಂದೆ ಬಂದು ನಿಂತಾಗ ರಮಣರು ಕೇಳಿದ ಪ್ರಶ್ನೆ ಸೇಲಂ ನಲ್ಲಿ ಒಂದು ಪಲ್ಲ ಬತ್ತದ ಬೇಲೆ ಏನು? ಎಂದು. ಅದಕ್ಕೆ ನರಸಿಂಹ ಸ್ವಾಮಿಗಳು  ನಾನು ಸೇಲಂ ಬಿಟ್ಟು ಆರು ತಿಂಗಳಾದವು ನನಗೆ ಗುರುವಿನ ಚಿಂತೆಯಿದ್ದು ಬತ್ತದ ಬೆಲೆಬಗ್ಗೆ ತಿಳಿದಿಲ್ಲೆಂದು ಬಹಳ ನಮ್ರತೆಯಿಂದ ಹೇಳಿದರು. ಆಗ ರಮಣರು ನೀನು ಸಂಸಾರ ಬಿಟ್ಟು ಲೌಕಿಕದಲ್ಲಿ ಇನ್ನೂ ಇದ್ದೀಯಾ ಎಂದು ತಿಳಿಯಲು ಪ್ರಶ್ನಿಸಿದೆ, ನೀನು ಉತ್ತೀರ್ಣನಾದೆ ಎಂದಿದ್ದರು.

ಅಲ್ಲಿ ಒಂದು ಗುಹೆಯಲ್ಲಿದ್ದು 'ನಾನು ಯಾರು' ಎಂಬ ಅನ್ವೇಷಣೆ ಮಾಡುತ್ತ ಮೂರು ವರ್ಷ ತಪಸ್ಸಿನಲ್ಲಿದ್ದರು. ಆ ಸಮಯ ರಮಣರ ಬಗ್ಗೆ 'ಸೆಲ್ಫ್ ರಿಯಲೈಸೇಶನ್' ಇಂಗ್ಲಿಷ್ ಭಾಷೆಯಲ್ಲಿ ಬರೆದರು. ಈ ಪುಸ್ತಕ ಯುರೋಪ್ ಅಮೆರಿಕಗಳಲ್ಲಿ ಮಾರಾಟವಾಗಿ ಅಲ್ಲಿಂದ ಭಕ್ತರು ತಿರುವಣ್ಣಾ ಮಲೈಗೆ ಬರಲು ಶುರು ಮಾಡಿದರು. ಸ್ವಾಮಿಗಳ ಶೇಕಡ 25 ಕಾರ್ಯ ಇಲ್ಲಿಗೆ ಮುಗಿದಿತ್ತು.

ಸಿದ್ಧಾರೂಢರ ಆಶ್ರಮಕ್ಕೆ ಬಂದಾಗ ಸಿದ್ಧಾರೂಢರು ಎಲ್ಲರನ್ನೂ ಉದ್ದೇಶಿಸಿ ಬೆಳಗೆದ್ದು ಸೂರ್ಯ ಉದಯಿಸಿದ ಎಂದು ತಿಳಿಯುವುದು ಹೇಗೆ ಎಂದಾಗ ನೆರೆದಿದ್ದ ಶಿಷ್ಯರೆಲ್ಲಾ ತಮಗೆ ತೋಚಿದ ಉತ್ತರ ನೀಡಿದರು. ಒಬ್ಬ ಸೂರ್ಯನ ರಶ್ಮಿ ಕಂಡು ಪಕ್ಷಿ ಗಳು ಚಿಲಿಪಿಲಿ ಎಂದಾಗ ಜನಸಂದಿಣಿ ಓಡಾಟ ಶುರುವಾದಾಗ ಸೂರ್ಯ ಉದಯಿಸಿದ್ದಾನೆ ಎಂದ. ಸಿದ್ಧಾರೂಢರು ಮುಗುಳ್ನಕ್ಕು ನರಸಿಂಹಸ್ವಾಮಿಯವರನ್ನು ಕೇಳಿದಾಗ

ಬೆಳಗ್ಗೆ ಎದ್ದು ನಮ್ಮೆದುರಿಗೆ ಬರುವವರಲ್ಲಿ ಆದಮ್ಯ ಚೈತನ್ಯ ಕಂಡು ಸೋದರ ಸೋದರಿಯನ್ನು ಗುರುತಿಸಿದಾಗ ಬೆಳಕಾಗಿದೆ ಎಂದರ್ಥ ಎಂದರು.

ಸಿದ್ಧಾರೂಢರಿಗೆ ಒಮ್ಮೆ ತೊಡೆಯಲ್ಲಿ ಹುಣ್ಣಾಗಿ ಕೀವು ತುಂಬಿತ್ತು. ಯಾತನೆ ತಡೆಯಲಾಗುತ್ತಿರಲಿಲ್ಲ. ಒಬ್ಬ ಆಯುರ್ವೇದದ ವೈದ್ಯ ಇವರ ಈ ಹುಣ್ಣನ್ನು ಯಾರಾದರೂ ಕಚ್ಚಿ ಕೀವು ಹೊರತೆಗೆದರೆ ತಕ್ಷಣ ವಾಸಿಯಾಗುವುದೆಂದರು. ಆಗ ಅಲ್ಲಿದ್ದ ಶಿಷ್ಯರುಗಳೆಲ್ಲಾ ಒಂದಲ್ಲ ಒಂದು ಕಾರಣ ಹೇಳುತ್ತ ಜಾಗ ಖಾಲಿಮಾಡಿದರು. ಕೆಲಸಮಾಡಲು ಯಾರೂ ಮುಂದುಬರಲಿಲ್ಲ. ಆಗ ನರಸಿಂಹ ಸ್ವಾಮಿಗಳು ಗುರುಗಳ ಪಾದ ಹಿಡಿದು ಅಪ್ಪಣೆ ಕೇಳಿದರು. ಗುರುಗಳು ಓಂನಮಶಿವಾಯ ಜಪ ಶುರುಮಾಡಿದರು. ನರಸಿಂಹ ಸ್ವಾಮಿಗಳು ಆ ಹುಣ್ಣಿಗೆ ಬಾಯಿಹಾಕಿ ಕಚ್ಚಿದರು. ಆದರೆ ಮಹಾದೇವ ಮತ್ತು ಮಾತಾ ಪಾರ್ವತಿಯ ಕೃಪೆಯಂತೆ ಅವರು ಕಚ್ಚಿದ್ದು ಮಾವಿನಹಣ್ಣನ್ನು. ಗುರುಗಳ ಹುಣ್ಣು ವಾಸಿಯಾಯಿತು. ಸಿದ್ಧಾರೂಢರು ಇವರನ್ನು ಪರೀಕ್ಷಿಸಲು ಮಾಯೆ ರಚಿಸಿದ್ದರು!

1929 ರಲ್ಲಿ ಇವರು ಸಿದ್ಧಾರೂಢ ಮಠದಲ್ಲಿ 9 ತಿಂಗಳಿದ್ದರು. ಅಲ್ಲಿಯ ಸ್ವಾಮಿಗಳ ಸಮಾಧಿ ನಂತರ 18 ತಿಂಗಳು ಪಂಡರಾಪುರದಲ್ಲಿದ್ದರು. ಪುಣೆಯ ಹಜರತ್ ಖಾನ್ ಸಮಾಧಿ ದರ್ಶನ ಮಾಡಿ ಮೆಹದಾರ್‌ದಗೆ ಹೊರಟಾಗ ಒಬ್ಬ ಫಕೀರ ನಿನಗೆ ಗುರು ತೋರಿಸುತ್ತೇನೆ. ನಾಲ್ಕು ಚರಂಡಿ ನೀರು ಸೇರುವ ಕಡೆ ನೀರು ತೆಗೆದು ಕುಡಿ ಎಂದಾಗ ಇವರೆ ಮುಂದಾದರು. ಆಗ ಆ ಫಕೀರ 'ಬೇಡ ನೀನು ಮೆಹರದಾದ್ ಹೋದಾಗ ನಿನಗೆ ಮಾರ್ಗದರ್ಶನ ದೊರೆಯುವುದು' ಎಂದ. ಅಲ್ಲಿಂದ ಖೇಡಗಾವ್ ತಲುಪಿದರು. ಅಲ್ಲಿ ನಾರಾಯಣ ಮಹಾರಾಜರ ಆದೇಶದಂತೆ ಅಹಮದ ನಗರದ ಹತ್ತಿರದ ಮೆಹರಬಾದ್ ತಲುಪಿದರು. ಅಲ್ಲಿ ಮೆಹರ ಬಾಬಾ ಮೌನದಲ್ಲಿದ್ದರು. ಅವರು ಒಂದು ಕಾಗದದ ಮೇಲೆ ಬರೆದು ತಮ್ಮ ಗುರುಗಳಾದ ಉಪಾಸಿನಿ ಮಹಾರಾಜರನ್ನು ಕಾಣಲು ತಿಳಿಸಿದರು. 1933ರರಲ್ಲಿ ಸಕೋರಿ ತಲುಪಿದರು. ಒಮ್ಮೆ ಸಕೋರಿಯಲ್ಲಿ ಪೂಜ್ಯ ಉಪಾಸಿನಿ ಮಹಾರಾಜರು ಸತ್ಸಂಗ ಏರ್ಪಡಿಸಿದ್ದರು. ಅನ್ನ ಸಂತರ್ಪಣೆ ನಡೆಯುತ್ತಿತ್ತು. ಕಡೆಯಲ್ಲಿ ಒಬ್ಬರು ಕುಷ್ಟ ರೋಗಿ ಸಂತ ಬಂದಿದ್ದರು. ಉಪಾಸಿನಿ ಮಹಾರಾಜರು ಶ್ರೀ ನರಸಿಂಹಸ್ವಾಮಿಗಳಿಗೆ ಅವರಿಗೆ ಆಹಾರ ತಿನ್ನಿಸಲು ಆದೇಶ ನೀಡಿದರು. ಅವರು ನೋಡುವುದಕ್ಕೆ ಅಸಹ್ಯವಾಗಿ

ಕಾಣಿಸುತ್ತಿದ್ದರು. ನರಸಿಂಹಸ್ವಾಮಿಗಳು ಅವರಿಗೆ ತಿನ್ನಿಸಿ ಕೆಳಗೆ ಬಿದ್ದಿದ್ದನ್ನು ಚೊಕ್ಕಟ ಮಾಡಿದರು. ಸಂತರು ತೆರಳಿದ ಮೇಲೆ ಉಪಾಸಿನಿ ಮಹಾರಾಜರು ಅಲ್ಲಿಂದ ಹೋದವರನ್ನು ತೋರಿಸಿ ನೆರೆದಿದ್ದವರಿಗೆ ಹೋದವರು ಯಾರೆಂದುಕೊಂಡಿದ್ದೀರಿ? ಅವರು ಸಾಯಿ ಬಾಬಾ. ಅವರು ಹೋದ ರೀತಿಯಿಂದ ಇದರ ಅರಿವಾಗುವುದು. ಅದನ್ನು ತಿಳಿದುಕೊಳ್ಳುವ ನರಸಿಂಹ ಸ್ವಾಮಿಗಳಿಗೆ ಮಾತ್ರ ಇದು ಅರ್ಥವಾಯಿತೆಂದರು. ಅಲ್ಲಿದ್ದು 'ಸೇಪ್ ಆಫ್ ಸಕೋರಿ' ಪುಸ್ತಕ ಹೊರತಂದರು. ಈಗ ಶೇಕಡ 25ರಷ್ಟು ಕೆಲಸ ಮುಗಿಯಿತು.

ಉಪಾಸಿನಿ ಮಹಾರಾಜರು ಇವರಿಗೆ ಶಿರಡಿಗೆ ಹೋಗಲು ಹೇಳಿದರೂ ಇವರ ಮನಸ್ಸು 1918ರಲ್ಲಿ ಸಮಾಧಿ ತೆಗೆದುಕೊಂಡವರು ತನಗೇನು ಸಹಾಯ ಮಾಡಿಯಾರು ಎಂಬ ಸಂದೇಹ ಕೊರೆಯಿತು. ಮತ್ತೆ ಒಬ್ಬ ಪಠಾಣ ನಿಂದ ಬಾಬಾರ ಬಗ್ಗೆ ಕೇಳಿ ಶಿರಡಿ ಸಮಾಧಿಗೆ ಬಂದು ನಿಂತ ತಕ್ಷಣ ಸಂಶಯಗಳು ದೂರವಾಗಿ ತಾನು ಹುಡುಕುತ್ತಿದ್ದ ಸತ್ಗುರು ಸಿಕ್ಕಿದರೆಂದು ಅರ್ಥವಾಗಿ ಆನಂದವಾಯಿತು.ಇಲ್ಲಿಂತೂ ಎಲ್ಲೂ ಆಗದ ಅನುಭವದ ಸಂತೋಷ ಒಮ್ಮೆಗೇ ಸಿಕ್ಕಿತ್ತು.

ಆಗ ಅಲ್ಲಿ ಶಾಮಾ, ಅಬ್ದುಲ್ ಬಾಬಾ, ಸಗುಣಮೇರು ನಾಯಕ್, ಲಕ್ಷ್ಮೀಬಾಯಿ ಶಿಂದೆ, ತಾತ್ಯಾ ಬಾಳಾ ಸಾಹೇಬ ಬಾಟೆ, ಬಿ.ವಿ. ದೇವ ಮಾರ್ತಾಂಡ್, ಕಾಕಾ ಮಹಾಜನಿ, ಲಕ್ಷ್ಮಣ ಮಾಮಾ, ಭಾಗೋಜಿ ಶಿಂದೆ, ಸಿಕ್ಕು ವಿಷಯ ವಿನಿಮಯವಾಯಿತು. ನಂತರದಲ್ಲಿ ಎಂ.ಬಿ. ರೇಗೆ ಜಸ್ಟಿಸ್ ಅವಸ್ತೆ ಹೆಚ್.ವಿ.ಸಾಟೆ, ಪ್ರೊಫೆಸರ್ ಆರ್.ಬಿ. ಪುರಂದರೆ, ದಾಮೋದರ ಸವ್ಯೆರಾಮ, ರಸನೆ ದತ್ತಾತ್ರಯ, ರಸನೆ ಸ್ವಾಮಿ ಶರಣಾನಂದ ಸ್ವಾಮೀಜಿ, ಖೇಡಗಾವ್ ನಾರಾಯಣ ಮಹಾರಾಜ ಮತ್ತು ಇನ್ನು ಕೆಲವು ಭಕ್ತರ ಮಕ್ಕಳು ಮೊಮ್ಮಕ್ಕಳು ಸಿಕ್ಕು ಅವರೆಲ್ಲರಿಂದ ಆದಷ್ಟು ವಿಷಯ ಸಂಗ್ರಹಿಸಿದರು. ಬಾಬಾರ ಸೇವಕ ರಘು ಶಿಂದೆಯನ್ನು ಭೇಟಿ ಮಾಡಿದರು. ಹತ್ತಿರದಲ್ಲಿರುವ ಅನೇಕ ಗ್ರಾಮಗಳಲ್ಲಿ ತಲುಪಿ ಅನೇಕರಿಂದ ವಿಷಯ ತಿಳಿದರು. 1941ರಲ್ಲಿ ಹೊಸ ಪುಸ್ತಕ 'ಡಿವೋಟೀಸ್ ಎಕ್ಸ್‌ಪೀರಿಯನ್ಸ್' ಹೊರತಂದರು. ಇಲ್ಲಿಗೆ ಅವರ ಇನ್ನು ಉಳಿದ ಶೇಕಡಾ 50ರಷ್ಟು ಶ್ರಮ ಪೂರ್ಣವಾಗಿತ್ತು.

1936ರ ವರೆವಿಗೂ ಶಿರಡಿಗೆ ಬರುತ್ತಿದ್ದವರ ಜನ ಹತ್ತು ಹನ್ನೆರಡಕ್ಕೆ ಹೆಚ್ಚಿರಲಿಲ್ಲ. ನರಸಿಂಹ ಸ್ವಾಮಿಯವರು ಬಾಬಾರ ಮಹಿಮೆಯನ್ನು

ದೇಶದಾದ್ಯಂತ ಸಾರಲು ನಿಶ್ಚಯಿಸಿದರು .ಶ್ರಮ ಪಟ್ಟು ಮರಾಟಿ ಸ್ವಲ್ಪ ಮಟ್ಟಿಗೆ ಕಲಿತು ಬಾಬಾರ ಸಂಪರ್ಕದಲ್ಲಿದ್ದ ಬಹುತೇಕ ಜನರುಗಳನ್ನು ಸಂಪರ್ಕಿಸಿದರು ಮತ್ತು ಆದಷ್ಟು ವಿಷಯ ಸಂಗ್ರಹಿಸಿದರು. ಸುಮಾರು ಅರವತ್ತಕ್ಕೂ ಹೆಚ್ಚು ಜನಗಳನ್ನು ಸಂಪರ್ಕಿಸಿದರು. ಅಂತಹವರ ಅನುಭವ ಗಳನ್ನು ತಿಳಿದು ಅವರಿಗೆ ತಿಳಿದಿದ್ದ ಇತರರ ಅನುಭವಗಳನ್ನೂ ಕೇಳಿ ತಿಳಿದುಕೊಂಡರು. ಪ್ರಾಪಂಚಿಕ ಸಂಕಷ್ಟಗಳಲ್ಲೇ ಆಗಲಿ ಅಥವಾ ಆಧ್ಯಾತ್ಮಿಕ ವಿಚಾರಗಳಲ್ಲಿ ಅವರುಗಳಿಗಾದ ಅನುಭವಗಳ ಬಗ್ಗೆ ಮಾಹಿತಿ ಪಡೆದರು. ಎಂ.ಬಿ. ರೇಗೆಯವರ ಮೂಲಕ ಗ್ವಾಲಿಯರ್ ವಾಸಿ ಪಿ.ಆರ್. ಅವಸ್ತೆಯವರ ಸಂಪರ್ಕವಾಗಿ ಆಗಿನ ಸಮಯದ ಸಾಯಿ ಲೀಲ ಪತ್ರಿಕೆ ಓದಿಸಿ ವಿಷಯಗಳನ್ನು ಗ್ರಹಿಸಿದರು. ರೇಗೆ ಮತ್ತು ಅವಸ್ತೆಯವರುಗಳ ಸಂಗಡ ಮಹಾರಾಷ್ಟ್ರದ ಹಲವಾರು ಸ್ಥಳಗಳ ಭೇಟಿ ಮಾಡಿ ಅನೇಕ ಭಕ್ತ ಜನಗಳನ್ನು ಕಂಡು ವಿಷಯಗಳನ್ನು ತಿಳಿದರು. ಆಗಿನ ಮದ್ರಾಸ್‌ನ ಸಂಡೆ ಟೈಮ್ಸ್‌ನಲ್ಲಿ ತಮ್ಮ ಲೇಖನಗಳ ಮೂಲಕ ಜನಗಳಿಗೆ ಬಾಬಾರ ಮಹಿಮೆಗಳ ಪರಿಚಯ ಮಾಡಿಸಿದರು. ಇವರ ಅತ್ಯುತ್ತಮ ಶೈಲಿಯ ಭಾಷೆಯಿಂದ ಪ್ರಭಾವಿತರಾದ ಜನ ಸುಮಾರು 30 40 ಲೇಖನಗಳ ಮೂಲಕ ಬಾಬಾರ ವಿಷಯ ಗಳನ್ನು ತಿಳಿದುಕೊಂಡರು ದೇಶದ ಲಕ್ಷಾಂತರ ಜನ ಇವರ ಲೇಖನ ಗಳಿಂದ ಬಾಬಾರ ಬಗ್ಗೆ ತಿಳಿಯುವಂತಾಯಿತು. ಶ್ರೀ ದೇವ ಮತ್ತು ಪುರಂದರೆಯವರಿಂದ ತಿಳಿದ ವಿಷಯಗಳು ಪತ್ರಿಕೆಗಳಲ್ಲಿ ಕಂಡುಬಂದವು. ಈ ಭಕ್ತರು ನರಸಿಂಹ ಸ್ವಾಮಿಜಿಯವರಿಗೆ ನಾನಾ ಸಾಹೇಬ ಚಂದೋರಕರ್ ಬಗ್ಗೆಯೂ ತಿಳಿಸಿದರು. ಮಸೀದಿಯ ಮುಂದಿದ್ದ ಸಗುಣ ಮೇರು ನಾಯಕರ ಉಪಹಾರ ಗೃಹ ನಡೆಯದಂತಾಯಿತು .ಆದರೆ ನರಸಿಂಹ ಸ್ವಾಮಿಯವರ ಆಗಮನದ ನಂತರ ಶಿರಡಿಯ ವ್ಯಾಪಾರದ ಸ್ಥಳಗಳಿಗೆ ಹೊಸ ರೂಪ ಮೂಡಿಬಂದಿತು.

1940ರಲ್ಲಿ ನರಸಿಂಹ ಸ್ವಾಮಿಯವರು ತಮ್ಮ 66 ರ ವಯಸಿನಲ್ಲಿ ಮದ್ರಾಸ್‌ನಲ್ಲಿ 'ಆಲ್ ಇಂಡಿಯಾ ಸಾಯಿ ಸಮಾಜ' ಶುರು ಮಾಡಿದರು. 1940–41 ರಲ್ಲಿ ಇಂಗ್ಲಿಷ್ ಮತ್ತು ತಮಿಳು ಭಾಷೆಗಳಲ್ಲಿ Devotees Experience of Sri Sayi Baba ಎಂಬ ಪುಸ್ತಕ ಹೊರ ತಂದರು.

ದಾಸ ಗಣು ಮಹಾರಾಜರ ಪುಸ್ತಕ ರಾವ್ ಬಹದ್ದೂರ್ ಪ್ರಧಾನ್ ಬರೆದ ಪುಸ್ತಕ ಮತ್ತು ದಾಬೋಲಕರ್‌ರವರ ಸಾಯಿ ಸತ್ ಚರಿತ ಮುಖ್ಯವಾದ ಪುಸ್ತಕಗಳು.ಸ್ವಾಮೀಜಿಯವರ ಮೊದಲ ಕೃತಿ who is

sayi baba and second Who is Saibaba released in 1939. ಮುಂದುವರಿದು ಇವರ ಕೃತಿಗಳಾದ charters and sayings' and gospels of Sri sayibaba' . further hymns in Sanskrit Sainath smaranam translated to English and tamil in 1944. ಸ್ವಾಮೀಜಿಯವರು ತಮಿಳಿನಲ್ಲಿ 'ಶ್ರೀ ಸಾಯಿ ನಾಟಕಂ' ನಾಟಕ ಬರೆದರು. ಶ್ರೀ ಸಾಯಿ ಹರಿಕಥ ಬರೆದರು. 12.9.1945ರಲ್ಲಿ Glimpses of Sayi Baba ಬರೆದರು. ಇವಲ್ಲದೆ ಇವರು ಬರೆದ ಇನ್ನೂ ಅನೇಕ ಪುಸ್ತಕಗಳಿವೆ. ಅವುಗಳೆಲ್ಲಾ ಬಹಳವಾಗಿ ಬೇರೆ ಬೇರೆ ಭಾಷೆಗಳಲ್ಲಿ ಭಾಷಾಂತರ ರೂಪ ದಲ್ಲಿ ದೊರೆಯುವುದು. ದಿನ ನಿತ್ಯ ಪೂಜೆ ಮಾಡಲು ಅನುಕೂಲ ಆಗುವಂತೆ 'ಸಾಯಿನಾಥ ಪೂಜಾವಿಧಿ' ಮತ್ತು 'ಸಾಯಿ ಸಹಸ್ರನಾಮ' ಹಾಗೂ 'ಅಷ್ಟೋತ್ತರ' ತಾವೇ ಬರೆದರು. ಇವು ಸಂಸ್ಕೃತ ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ದೊರೆಯುವುದು.

ಇನ್ನೂ ಮೆರಗು ಕೊಡಲೆಂದು ಪ್ರತಿವರ್ಷ ಸಾಯಿ ಭಕ್ತರ ಕೂಟ ನೆರವೇರಿಸುತ್ತಿದ್ದರು 1946 ರಲ್ಲಿ ಮೈಸೂರು, ಮದರಾಸ್‌ನಲ್ಲಿ ನಾಲ್ಕುದಿನ ಆಚರಿಸಲಾಯಿತು. ಇನ್ನೂರಕ್ಕೂ ಹೆಚ್ಚು ಭಕ್ತರು ಭಾಗವಹಿಸಿದ್ದರು. ಮಾಲ್ಸಾಪತಿಯವರ ಮಗ ಮಾರ್ತಾಂಡ ಭಾಗವಹಿಸಿದ್ದರು. ಶೆಣೈ ನಗರದ ಕೇಶವಯ್ಯ ಭಾಗವಹಿಸಿದ್ದರು .ಬಂದ ಭಕ್ತರು ತಮಗಾದ ಅನುಭವಗಳನ್ನು ಹಂಚಿಕೊಂಡರು. ಕ್ರಮೇಣ ಈ ಉತ್ಸವ ಮುಂದೆಯೂ ನಡೆದುಕೊಂಡು ಸ್ವಾಮೀಜಿಯವರಿಗೆ ರೋಗಗಳನ್ನು ಗುಣಪಡಿಸುವ ಶಕ್ತಿ ಪ್ರಾಪ್ತವಾಗಿತ್ತು. ಇವರ ಶಕ್ತಿ ಕುಂದಿ ಮುಂದಿನ ವರ್ಷಗಳಲ್ಲಿ ಶ್ರೀ ಸಾಯಿಪಾದಾನಂದ ಮತ್ತು ಶ್ರೀ ಕೇಶವಯ್ಯ ಅಧ್ಯಕ್ಷ ತೆ ವಹಿಸುತ್ತಿದ್ದರು .1940ರಲ್ಲಿ 'ಸಾಯಿ ಸುಧ' ಮಾಸಿಕ ಇಂಗ್ಲಿಷ್, ತೆಲುಗು, ತಮಿಳು ಭಾಷೆಗಳಲ್ಲಿ ಬರುತ್ತಿದ್ದವು.

ಪ್ರತಿವರ್ಷ ಮದ್ರಾಸ್‌ನಲ್ಲಿ ಮೂರು ವಾರ್ಷಿಕ ಉತ್ಸವ ನಡೆಸು ತ್ತಿದ್ದರು. ರಾಮನವಮಿ, ಸಮಾಧಿ ದಿನ ಮತ್ತು ಗುರುಪೂರ್ಣಿಮ ತಪ್ಪದೆ ನಡೆಯುತ್ತಿತ್ತು. ಹತ್ತು ದಿನಗಳು ಬಡವರಿಗೆ ಅನ್ನ ದಾನ ನೆಡೆಯುತ್ತಿತ್ತು. ಉಧಿ ಮತ್ತು ಬಾಬಾರ ಚಿತ್ರಗಳನ್ನು ಪ್ರಸಾದ ರೂಪದಲ್ಲಿ ಕೊಡಲಾಗುತ್ತಿತ್ತು. 1954 ರಲ್ಲಿ ಬಡವರಿಗಾಗಿ ಡಿಸ್ಪೆನ್ಸರಿ ನಡೆಸಲಾಗುತ್ತಿತ್ತು. ಬೆಂಗಳೂರಿನ ಪಪ್ಪಯ್ಯ ಚೆಟ್ಟಿ ಎನ್ನುವರು ಸ್ವಾಮಿ ಪುಸ್ತಕ ಓದಿ ಇವರಿಗೆ 11458 ರೂ. ಕಾಣಿಕೆ ರೂಪದಲ್ಲಿ ಕೊಟ್ಟರು.

1949 ರಲ್ಲಿ ಬ್ರೂಡೀಸ್ ರೋಡ್‌ನಿಂದ ಅಲಮೇಲು ಮಂಗಾಪುರ,

ಮೈಲಾಪುರಕ್ಕೆ ಬಂದರು ತಮ್ಮ ಕೃತಿಗಳಿಗೆ ಬಂದ ಉತ್ಸಾಹ ಪೂರಿತ ಕಾಣಿಕೆಯಿಂದ ಮೈಲಾಪುರದಲ್ಲಿ 1952 ರಲ್ಲಿ ಒಂದು ಸಭಾಗೃಹ ಕಟ್ಟಿಸಿ ಬಾಬಾರ ಚಿತ್ರ ಇಟ್ಟರು. 1953 ರಲ್ಲಿ ಶಿರಡಿಯಲ್ಲಿರುವ ತರಹದ ಗೋಪುರ ಕಟ್ಟಿಸಲಾಯಿತು.

1954 ರಲ್ಲಿ ಬಚ್ಚಲು ಮನೆಯಲ್ಲಿ ಬಿದ್ದು ಓಡಾಡಲಾಗುತ್ತಿರಲಿಲ್ಲ. ಇವರ ಕೆಲಸಗಳಿಗೆ ಟೈಪಿಸ್ಟ್ ಕೊಡಲಾಗಿತ್ತು. ಇಲ್ಲದಿದ್ದರೆ ತಮ್ಮ ಕೈಲಿ ಪ್ರಚಾರಕಾರ್ಯ ಮುಂದುವರಿಸಲಾಗುತ್ತಿರಲಿಲ್ಲವೆಂದು ಹೇಳಿದ್ದರು. ನಂತರ ಮೈಸೂರು ಮಹಾರಾಜರು 5000 ರೂ. ಕೊಟ್ಟು ಪ್ರೆಸ್ಸನ್ನು ಕೊಳ್ಳಲಾಯಿತು. 'ಲೈಫ್ ಆಫ್ ಸಾಯಿಬಾಬಾ' ಪೂರ್ತಿ ಮಾಡಿದರು. ಇದಕ್ಕೆ ಯಾವ ಹಕ್ಕು ಕೂಡ ಇಲ್ಲ. 12.9.1956 ಇವರ 83ನೇ ವರ್ಷದ ಜನ್ಮದಿನ ಆಚರಿಸಲಾಯಿತು. ನಂತರ ಸ್ವಾಮೀಜಿಗೆ ಹಾಸಿಗೆಯಿಂದ ಏಳಲಾಗಲಿಲ್ಲ. ಆದರೂ ಕೈಲಾದಷ್ಟು ಪ್ರಚಾರ ನಡೆಸುತ್ತಿದ್ದರು. ಹಾಸಿಗೆ ಮೇಲಿಂದಲೇ ಕೆಲಸ ಜರುಗಿಸುತ್ತಿದ್ದರು. 19.10.1956 ರಂದು ಬಾಬಾರ ಚರಣ ಸೇರಿದರು. ಬಾಬಾರ ಚಮತ್ಕಾರದಿಂದಾಗಿ ಶಿರಡಿಗೆ ಎಳೆಯಲ್ಪಟ್ಟು ತಮ್ಮ ಕೈಲಾದ ಕೆಲಸವೆಲ್ಲವನ್ನೂ ನಿಸ್ವಾರ್ಥ ಭಾವದಿಂದ ಕೊನೆಯುಸಿರಿನವರೆವಿಗೂ ನಡೆಸಿಕೊಂಡು ಬಂದರು.

1966 ರಲ್ಲಿ ಶ್ರೀ ಎಂ.ಬಿ. ರೇಗೆ ಸಮಾಧಿ ಮಂದಿರದಲ್ಲಿ ಸ್ವಾಮೀಜಿ ಯವರ ಚಿತ್ರ ಅನಾವರಣ ಮಾಡಿದರು. ಇವರನ್ನು ಹಿರಿಮೆಯ ಸಾಯಿ ಧೂತ ಎಂದು ಪರಿಗಣಿಸಲಾಗಿದೆ. ಭಾರತದಲ್ಲೆಲ್ಲೂ ಬಾಬಾರನ್ನು ತಿಳಿಯದ ಜನಗಳಾಗಲಿ ಪಟ್ಟಣಗಳಾಗಲಿ ಇಲ್ಲ .ಇದರ ಕಾರಣ ಶ್ರೀ ನರಸಿಂಹ ಸ್ವಾಮಿಗಳಾಗಿರುತ್ತಾರೆ.

1943 ರಲ್ಲಿ ಮೋರೇಶ್ವರ ಪ್ರಧಾನ್ ನರಸಿಂಹ ಸ್ವಾಮಿಯವರ ಬಗ್ಗೆ ಈ ರೀತಿ ಹೇಳಿದ್ದಾರೆ. ಸಾಯಿಯಂತಹ ಮಹಾತ್ಮರ ಬಗ್ಗೆ ಪದಗಳಲ್ಲಿ ಹೇಳುವುದು ಅಸಾಧ್ಯ. ಆದರೆ ಶ್ರೀ ನರಸಿಂಹ ಸ್ವಾಮಿಯವರ ಶ್ರಮದಿಂದಾಗಿ ಬಾಬಾರ ಮಹಿಮೆ  ಇಂಗ್ಲಿಷ್ ತಮಿಳು ತೆಲುಗು ಸಂಸ್ಕೃತ, ಕನ್ನಡ, ಮಲಯಾಳಂ, ಹಿಂದಿ, ಗುಜರಾತಿ, ಬೆಂಗಾಲಿ ಭಾಷೆಗಳಲ್ಲಿ ಅವರು ಆ ದೇಶಗಳಿಗೆ ತಾವೆ ಹೋಗಿ ಮಾತನಾಡಿ, ಜನಗಳ ಹೃದಯ ಗೆದ್ದು ಸಾಯಿಮಹಿಮೆಯ ಪ್ರಚಾರ ಮಾಡಿರುತ್ತಾರೆ. ಸಾಯಿನಾಥರಂತಹ ಅವತಾರ ಪುರುಷರ ಪರಿಚಯ ಇಂತಹ ಮಹಾತ್ಮರಿಂದ ಆಗಿದೆ.

ಸ್ವಾಮೀಜಿ  1956 ರ ಅಕ್ಟೋಬರ್ 19ರಂದು 3.45 ಮಧ್ಯಾಹ್ನ

ದೇಹ ತ್ಯಾಗ ಮಾಡಿದರು. ರಾಧಾಕೃಷ್ಣ ಸ್ವಾಮಿ ಬರುವುದಕ್ಕೆ ಮುಂಚೆ ಚಿತಾ ದಹನ ನಡೆದಿತ್ತು. ಸ್ವಾಮಿ ಶುದ್ಧಾನಂದರ ನೇತೃತ್ವದಲ್ಲಿ ಕೇಶವಯ್ಯ ಮತ್ತು ವರದರಾವ್ ಕ್ರಿಯೆಗಳನ್ನು ನಡೆಸಿದರು. 1956 ಅಕ್ಟೋಬರ್ 31 ರಂದು ಶ್ರೀ ರಾಧಾಕೃಷ್ಣ ಸ್ವಾಮೀಜಿಯವರು ಶ್ರದ್ಧಾಂಜಲಿ ಅರ್ಪಿಸಿದರು. ಸ್ವಾಮೀಜಿ ಯಾವ ರೋಗವೂ ಅಥವಾ ಯಾತನೆಯೂ ಇಲ್ಲದ ಸ್ಥಿತಿಯಲ್ಲಿ 82ನೆಯ ವಯಸ್ಸಿನಲ್ಲಿ ಸಿದ್ಧಪುರುಷರಂತೆಯೇ ದೇಹ ತ್ಯಜಿಸಿದರು.

ಶ್ರೀ ನರಸಿಂಹ ಸ್ವಾಮೀಜಿಯವರ ಸ್ಮಾರಕವಾಗಿ All India Sayi Samaj ನಲ್ಲಿ ಕಾಟೇಜ್ ಕಟ್ಟಿಸಲಾಗಿದೆ.

ಈ ಕೆಳಗೆ ಸ್ವಾಮಿಯವರ ಬಗ್ಗೆ ಕೆಲವು ಹೆಚ್ಚು ಮಾಹಿತಿ ಕಾಣ ಬಹುದು.

ಒಮ್ಮೆ ಅಜ್ಮೀರದಲ್ಲಿ ಪುಷ್ಕರಣಿಯಲ್ಲಿ ಸ್ನಾನ ಮಾಡುತ್ತಿದ್ದಾಗ ಒಂದು ಮೊಸಳೆ ಇವರ ಬಲದ ಕಾಲು ಹಿಡಿಯಿತು. ಇವರು ಆಗ ತಮ್ಮ ಆರಾಧ್ಯ ದೈವ ಶ್ರೀರಾಮನನ್ನು ಸ್ಮರಿಸಿದರು. ಆಗ ಅಲ್ಲೇ ನಿಂತಿದ್ದ ಒಬ್ಬ ಪಂಜಾಬಿ ತನ್ನ ರೈಫಲ್‌ನಿಂದ ಮೊಸಳೆಯನ್ನು ಗುಂಡಿಟ್ಟು ಹೊಡೆದು ಸಾಯಿಸಲು ಇವರು ಬಚಾವಾದರು. ಆಗ ಕುಹಕದಿಂದ ಯಾರೋ ಕೇಳಿದರು. 'ನಿಮ್ಮ ಕಾಲನ್ನು ಮೊಸಳೆ ಹಿಡಿದಾಗ ಆ ರಾಮ ಎಷ್ಟು ದೂರದಲ್ಲಿದ್ದ?' ಅದು ತಿಳಿಯದು, ಆದರೆ ಆ ಪಂಜಾಬಿಗೆ ಶ್ರೀ ರಾಮ ಹತ್ತಿರದಲ್ಲಿದ್ದನೆಂದಿದ್ದರು!

ಒಮ್ಮೆ ಒಬ್ಬ ಅಧ್ಯಾಪಕ ಬಂದು ಇವರನ್ನು 'ಸ್ವಾಮಿ ನನ್ನ ಮಗಳ ಮದುವೆಯಿದೆ. ನನಗೆ 800 ರುಪಾಯಿ ಬೇಕಾಗಿದೆ. ದಯಮಾಡಿ ಸಹಾಯ ಮಾಡಿ' ಎಂದರು. ತಕ್ಷಣ ನರಸಿಂಹ ಸ್ವಾಮಿಗಳು ತಮ್ಮ ಗುಮಾಸ್ತನನ್ನು ಕರೆದು ನಾಳೆಯ ಬಂದ ಹಣವನ್ನೆಲ್ಲಾ ಇವರಿಗೆ ಕೊಡು ಎಂದರು. ಮಾರನೆ ದಿನ 1400 ರುಪಾಯಿ ಬಂದಿತ್ತು. ಗುಮಾಸ್ತ ತನ್ನ ಬುದ್ಧಿ ಉಪಯೋಗಿಸಿ 800 ರುಪಾಯಿ ಕೊಟ್ಟು ರಸೀದಿ ಪಡೆದು ನರಸಿಂಹ ಸ್ವಾಮಿಗಳಿಗೆ ಕೊಟ್ಟ. ಆಗ ನರಸಿಂಹ ಸ್ವಾಮಿಗಳು 'ನೆನ್ನೆ 1400 ರುಪಾಯಿ ಬಂದಿರುವುದು ಅಲ್ಲವೇ? ನೀನೇಕೆ ಚೌಕಾಸಿ ಮಾಡಿದೆ? ಮಿಕ್ಕ 600 ರುಪಾಯಿ ತಂದುಕೊಡು' ಎಂದು ಹೇಳಿ ಬಾಕಿ ಹಣ ಕೊಡಿಸಿದರು! ಇದು ಅವರ ಸೌಹಾರ್ದತೆ.

ಇವರು ಶ್ರೀ ರಾಮನ ಪರಮ ಭಕ್ತರು. ಸೇಲಂ ನಲ್ಲಿ ಒಬ್ಬ ಕ್ಲೈವ್ ಕರ್ಟಿಸ್ ಎಂಬ ಆಂಗ್ಲ ಕಲೆಕ್ಟರ್ ಇದ್ದ ಅವನಿಗೆ ಸಂತಾನವಿರಲಿಲ್ಲ.

ಯಾರೋ ಆತನಿಗೆ 'ಅಯ್ಯರ್ ನಿಮ್ಮ ಪರವಾಗಿ ರಾಮನ ವ್ರತಮಾಡಿದರೆ ನಿಮಗೆ ಸಂತಾನ ಆಗುವುದು' ಎಂದರು. ಆತ ಇವರನ್ನು ವಿನಂತಿ ಮಾಡಿಕೊಳ್ಳಲು ನರಸಿಂಹ ಸ್ವಾಮಿಯವರಿಗೆ ಗಲಿಬಿಲಿಯಾಯಿತು. ಅದರೂ ಇಲ್ಲ ಎಂದು ಹೇಳಲಾಗದೆ ಒಂಬತ್ತು ದಿನಗಳು ಉಪವಾಸವಿದ್ದು ರಾಮಾಯಣ ಪಾರಾಯಣ ಮಾಡಿ ನಂತರದಲ್ಲಿ ಆತನ ಪತ್ನಿಗೆ ಪುತ್ರ ಸಂತಾನವಾಯಿತು. ರಾಮ ಭಕ್ತಿಯ ಬಗ್ಗೆ ನರಸಿಂಹ ಸ್ವಾಮಿಯವರು ಸದಾ ದೃಢಪಡಿಸುತ್ತಿದ್ದರು.

1951ರಲ್ಲಿ ನಡೆದ ಘಟನೆ. ಶ್ರೀಮತಿ ರಾಧಾ ಮತ್ತು ಶ್ರೀ ರಾಜಗೋಪಾಲ ತಮ್ಮ ಮಗಳ ಮದುವೆಗೆ ತಂಜಾವೋರ್‌ಗೆ ಹೋಗಬೇಕಾಗಿತ್ತು. ಮೊದಲು ಸ್ವಾಮಿಯವರ ಆಶೀರ್ವಾದ ಪಡೆಯಲೆಂದು ಮೈಲಾಪುರಕ್ಕೆ ಬೆಳಗ್ಗೆ ಆರು ಗಂಟೆಗೆ ಬಂದರು. ಆದರೆ ಸ್ವಾಮಿಗಳು ಸೂರ್ಯೋಪಾಸನೆಗೆ ಕಪಾಲೀಶ್ವರ ದೇವಸ್ಥಾನಕ್ಕೆ ತೆರಳಿದ್ದರು. ಸಮಯ ಕಮ್ಮಿಯಿದ್ದ ಕಾರಣ ದಂಪತಿಗಳು ಸ್ವಾಮಿಯವರ ಆಶೀರ್ವಾದ ಪಡೆಯಲು ಅಲ್ಲಿಗೇ ಹೋದರು. ಮೆಟ್ಟಲು ಹತ್ತಿ ಬರುತ್ತಿದ್ದ ಸ್ವಾಮಿಗಳು ಮಾಂಗಲ್ಯ ಅಲ್ಲೇ ಮುಟ್ಟಿ ಆಶೀರ್ವಾದ ಮಾಡಿಹೋದರು. ರಾಧಾ ಅಲ್ಲೇ ನಿಂತಿದ್ದರು. ಅಷ್ಟರಲ್ಲಿ ಕೆಳಗಿನಿಂದ ಕೆಲವು ಭಕ್ತರು ಓಡಿಬಂದು ಇವರನ್ನು ತಳ್ಳಿಕೊಂಡು ಬಂದಾಗ ಇವರ ಕೈಲಿದ್ದ ಮಾಂಗಲ್ಯ ನೀರಿಗೆ ಬಿದ್ದು ಕಾಣದಾಯಿತು. ದಂಪತಿಗಳಿಗೆ ಕೈಗೆ ಬಂದ ತುತ್ತು ಬಾಯಿಗೆಬರಲಿಲ್ಲ ಎಂದು ದುಃಖವಾಗಿ ಅಳುತ್ತಿದ್ದರು. ಅಪಶಕುನ ಎಂದು ಅಳುತ್ತ ಸಾಯಿ ಮಂದಿರಕ್ಕೆ ಬಂದರು. ಸ್ವಾಮಿಗಳು ವಿಷಯ ತಿಳಿದು ತುಳಸಿಯಿಂದ ಪೂಜೆ ಮಾಡುತ್ತಿದ್ದವರು ಕೆಲವು ತುಳಸಿ ದಳ ಇವರ ಕೈಗಿತ್ತರು. ನಂತರ ಇದರಲ್ಲಿ ನಿಮಗೆ ಮಾಂಗಲ್ಯ ಸಿಗುವುದು. ನಿನ್ನದನ್ನು ಮದುವೆಗೆ ಉಪಯೋಗಿಸಿ ಉಳಿದದ್ದನ್ನು ಕಲ್ಯಾಣಿಯಲ್ಲಿ ಬಿಡಿ ಎಂದರು. ದಂಪತಿಗಳ ಆಶ್ಚರ್ಯಕ್ಕೆ ಸ್ವಾಮಿ ನೀಡಿದ ತುಳಸಿ ಅವರು ತಂದಿದ್ದ ಮಾಂಗಲ್ಯವೇ ಆಗಿತ್ತು. ಎರಡು ಮಾಂಗಲ್ಯಗಳಿದ್ದವು ಒಂದನ್ನು ಉಪಯೋಗಿಸಿ ಇನ್ನೊಂದನ್ನು ಕಲ್ಯಾಣಿಗೆ ವಿಸರ್ಜನೆ ಮಾಡಿದರು. ಈಗಲೂ ಅವರ ಮನೆಯಲ್ಲಿ ಸ್ವಾಮಿ ಯವರು ತುಳಸಿಯನ್ನು ಮಾಂಗಲ್ಯಮಾಡಿದ್ದು ಸುರಕ್ಷಿತವಾಗಿ ಅವರ ಮನೆಯಲ್ಲಿರಿಸಲಾಗಿದೆ.

ಬಾಬಾ ಸ್ವಾಮಿಯವರಿಗೇ ಅಪಾರ ಶಕ್ತಿ ನೀಡಿದ್ದರು. ಪ್ರತಿ ಕ್ಷಣ ಅವರು ಪವಾಡ ಮಾಡಬಹುದಾಗಿತ್ತು. ಆದರೆ ಅವರು ಸ್ವಾರ್ಥಕ್ಕಾಗಲಿ

ಪ್ರದರ್ಶನಕ್ಕಾಗಲಿ ಶಕ್ತಿಯ ದುರುಪಯೋಗ ಮಾಡಿಕೊಳ್ಳಲಿಲ್ಲ. ಎಲ್ಲವನ್ನೂ ಸಾಯಿನಾಥನಿಗೆ ಅರ್ಪಿಸಿಬಿಟ್ಟಿದ್ದರು!

ಸ್ವಾಮಿಯವರು ದೇಹ ತ್ಯಜಿಸಿದಾಗ ನೀಡಿದ ಕಡೆಯ ಸಂದೇಶ ನೀವು ಯಾರಿಗಾದರೂ ಉಪಕಾರ ಮಾಡಿದ್ದರೆ ಅದನ್ನು ಮರೆತುಬಿಡಿ. ನಿಮಗೆ ಯಾರಾದರೂ ತೊಂದರೆ ಕೊಟ್ಟಿದ್ದರೆ ಅದನ್ನೂ ಮರೆತುಬಿಡಿ; ಆಗ ನಿಮಗೆ ಆತ್ಮ ಉನ್ನತಿ ಉಂಟಾಗುತ್ತದೆ ಎಂದಿದ್ದರು.

**ಪೂಜ್ಯ ನರಸಿಂಹ ಸ್ವಾಮಿಗಳು ಸಂಪರ್ಕಿಸಿದ ಸಂತರು**



ಶೃಂಗೇರಿ ಶ್ರೀ ಚಂದ್ರಶೇಖರ ಭಾರತಿ ಸ್ವಾಮಿಗಳು 1925 ರಲ್ಲಿ ತಮ್ಮ ಮನೆಯನ್ನು ಬಿಟ್ಟು ಶೃಂಗೇರಿ ತಲುಪಿ ಶ್ರೀ ಶ್ರೀ ಚಂದ್ರಶೇಖರ ಭಾರತಿಗಳನ್ನು ಸಂಪರ್ಕಿಸಿದರು. ಶ್ರೀಗಳು ಇವರಿಗೆ ರಮಣರನ್ನು ಕಾಣಲು ತಿಳಿಸಿದರು.



ಶ್ರೀಗಳ ಆದೇಶದಂತೆ ತಿರುವಣ್ಣಾಮಲೈ ತಲುಪಿ ರಮಣರನ್ನು ಕಂಡು ಅಲ್ಲಿ ಒಂದು ಗುಹೆಯಲ್ಲಿ ತಮ್ಮ ಸಾಧನೆ ಶುರು ಮಾಡಿದರು. ಅಲ್ಲಿ ವೇದಾಂತ ಕಲಿತರು.

ರಮಣಶ್ರೀರನ್ನು ಕುರಿತು 'Self Realization' ಎಂಬ ಪುಸ್ತಕ ಬರೆದು ಜಗತ್ತಿಗೆ ರಮಣರ ಪರಿಚಯ ಮಾಡಿಸಿದರು.



ನಂತರ ಹುಬ್ಬಳ್ಳಿ ತಲುಪಿ ಪೂಜ್ಯ ಸಿದ್ಧಾರೂಢರ ಆಶ್ರಯದಲ್ಲಿದ್ದು ಒಂಬತ್ತು ತಿಂಗಳು ಕಳೆದು ಗುರುಗಳ ಸದ್ಗತಿಯಾದ ನಂತರ ಮುಂದೆ ಹೊರಟರು.

ಪಂಡರಾಪುರದಲ್ಲಿ 18 ತಿಂಗಳುಗಳಿದ್ದು ಮರಾಠಿ ಕಲಿತರು. ಅಲ್ಲಿ ಆ ಸಮಯದ ಅವಧೂತ ರಾದ ಸ್ವಾಮಿನಿ ಬಾಪುಮಾಯಿ ಆಶ್ರಯದಲ್ಲಿದ್ದು ಅವರು ಒಮ್ಮೆ ಸ್ಮಶಾನಕ್ಕೆ





ಕರೆದೊಯ್ದರು. ಅಲ್ಲಿ ಊಟ ಮಾಡಿಸಿ 'ದೇವರನ್ನು ಕಂಡೆಯ' ಎಂದರು. ಇವರು ಇಲ್ಲ ಎಂದು ಹೇಳಲು 'ನಿನಗೆ ಅನ್ನ ಹಾಕಿದವರು ವಿಠ್ಠಲ. ಎಲ್ಲರಲ್ಲೂ ವಿಠ್ಠಲ ನನ್ನು ಕಾಣು' ಎಂದು ಬೋಧಿಸಿದರು.



ಸ್ವಾಮೀಜಿಗೆ ತಡೆಯಲಾರದ ತಲೆನೋವು ಶುರುವಾಗಿತ್ತು. ಝಿಪ್ರು ಅಣ್ಣನಿಗೆ ತಮ್ಮ ಕಷ್ಟ ಹೇಳಲು ಅವರು ಇವರ ತಲೆಯನ್ನು ನೆಕ್ಕಿದರು. ಆಗ ಇವರ ತಲೆನೋವು ಮಾಯವಾಯಿತು. ನಿನ್ನ ಕೀರ್ತಿ ಸ್ವರ್ಗಲೋಕ ತಲಪುತ್ತದೆ. ನಿನಗೆ ನಾನು ಗುರುವಾಗ ಬಾರದಿತ್ತೆ ಎಂದು ನನಗೆ ವಿಷಾದವಾಗುತ್ತಿದೆ ಎಂದರು ಗುರುಗಳು.






ಖೇಡಗಾವ್‌ನ ನಾರಾಯಣ ಮಹಾರಾಜ ಇವರಿಗೆ ಮೆಹರ್ ಬಾಬಾನ ಭೇಟಿ ಮಾಡಲು ಹೇಳಿದರು.

ಮೆಹರ್ ಬಾಬಾರನ್ನು ಭೇಟಿ ಮಾಡಿದಾಗ ಅವರು ಮೌನ ದಲ್ಲಿದ್ದು ಇವರನ್ನು ಉಪಾಸಿನಿ ಮಹಾರಾಜರನ್ನು ಭೇಟಿಯಾಗಲು ತಿಳಿಸಿದರು.




ಪುಣೆಯ ಬಾವಡಿ ಚಾರ್‌ನ ಹಝರತ್ ಬಾಬಾ ಜಾನ್‌ರ ಆಶೀರ್ವಾದ ಪಡೆದರು.



ಉಪಾಸಿ ಮಹಾರಾಜರಿಗೆ ಸಾಮಾಜಿಕ ತೊಂದರೆಗಳಿದ್ದು ಸ್ವಾಮಿಗಳು ಅವನ್ನು ನಿವಾರಿಸಲು ಸಹಾಯ ಮಾಡಿದರು. ಅವರ ಮಾತಿನ ಮೇರೆಗೆ ಶಿರಡಿಗೆ ಬಂದರು. ಇದಕ್ಕೆ ಮೊದಲು ಒಬ್ಬ ಪಠಾಣ ಶಿರಡಿಗೆ ಹೋಗಲು ಹೇಳಿ ಇವರು ಹೋಗಿರಲಿಲ್ಲ. ಇವರಿಗೆ ಸಮಾಧಿಯಾದ ಸಂತರ ಮೇಲೆ ಇದ್ದ ಶೂನ್ಯನಂಬಿಕೆ ಏನೆಂದರೆ 1918ರಲ್ಲಿ ಸಮಾಧಿ ತೆಗೆದುಕೊಂಡವರು ನನಗೆ ಹೇಗೆ ಸಹಾಯ ಮಾಡಲು ಸಾಧ್ಯ? ಎಂಬ ಧೋರಣೆ!




**ಪುಷ್ಕರ ಸರೋವರ, ರಾಜಾಸ್ಥಾನ**



**ಹಳೆಯ ಸಮಾಧಿ ಮಂದಿರ**

## ಶ್ರೀ ಸಾಯಿಪಾದಾನಂದ
## ಶ್ರೀ ರಾಧಾಕೃಷ್ಣ ಸ್ವಾಮೀಜಿ (15.4.1906 – 14.1.1980)



1956 ರಲ್ಲಿ ಪೂಜ್ಯ ನರಸಿಂಹ ಸ್ವಾಮಿಗಳ ಸಮಾಧಿ ಯಾಯಿತು. ಅವರು ತಮ್ಮ ಶಕ್ತಿಗಳನ್ನೆಲ್ಲಾ ಶ್ರೀ ರಾಧಾಕೃಷ್ಣ ಸ್ವಾಮಿಗಳಿಗೆ ನೀಡಿದ್ದರು. ಬೆಂಗಳೂರಿನ ತ್ಯಾಗರಾಜ ನಗರದಲ್ಲಿ ಆಧ್ಯಾತ್ಮಿಕ ಕೇಂದ್ರ ಸ್ಥಾಪಿಸಿ ಅಲ್ಲಿ ಕಾರ್ಯ ನಿರ್ವಹಿಸುತ್ತ ಪೂಜ್ಯ ನರ ಸಿಂಹ ಸ್ವಾಮಿಗಳ ಕಾರ್ಯ ಗಳನ್ನು ಸ್ವಲ್ಪವೂ ಚ್ಯುತಿ ಬಾರದಂತೆ ಮುಂದುವರಿ ಸಿದರು. ಸಾಯಿನಾಥನ ಆಶ್ರಯಕ್ಕೆ ಬಂದ ಎಲ್ಲಾ ಭಕ್ತರಿಗೂ ಶಾಂತಿ ಸಾಮರ್ಥ್ಯ ಮತ್ತು ಆನಂದ ನೀಡುವುದರಲ್ಲಿ ಯಶಸ್ವಿ ಸಾಧಿಸಿದರು.

ಶ್ರೀ ರಾಧಾಕೃಷ್ಣ ಸ್ವಾಮೀಜಿ ನರಸಿಂಹ ಸ್ವಾಮಿಗಳನ್ನು ಸುಮಾರು 1943–44 ರಲ್ಲಿ ಸೇರಿದರು. ಎರಡು ಪುಸ್ತಕಗಳನ್ನು ಬರೆದರು.

ಪೂರ್ಣವಾಗದ 'Life of Shri Narasimha Swamy - Apostle of Sai Baba and To my dear children' ಎಂಬ ಎರಡು ಪುಸ್ತಕಗಳಿವೆ. 1945ರಿಂದ ಸ್ವಾಮಿ ನರಸಿಂಹ ಸ್ವಾಮಿಯವರು ಶ್ರೀ ರಾಧಾಕೃಷ್ಣ ಸ್ವಾಮಿ ಯವರನ್ನು Executive Member of Shirdi Samsthan ಮಾಡಿ ಕಳಿಸಿದರು. ಅಲ್ಲಿದ್ದವರು ಇವರನ್ನು ಯೋಗ್ಯನೆಂದು ಪರಿಗಣಿಸಲಿಲ್ಲ. ಯಾರಿಗೂ ತಿಳಿಯದ ಭೀಮರಾವ್‌ರವರನ್ನು All India Sai Samaj ಅಧ್ಯಕ್ಷರನ್ನಾಗಿ ಮಾಡಿದರು. ರಾಧಾಕೃಷ್ಣ ಸ್ವಾಮಿಗಳು 12 ವರ್ಷ ಮೈಲಾಪುರ ಮಂದಿರಕ್ಕೆ ಹೋಗಲಿಲ್ಲ. ನಂತರ ಬಹಳ ಜನಗಳ ಕೋರಿಕೆಗಾಗಿ ಮಣಿದು 1980ರ ತನಕ ಅಧ್ಯಕ್ಷ ಸ್ಥಾನದ ಕಾರ್ಯ ನಿರ್ವಹಿಸಿದರು. ತಮ್ಮ

ಗುರುವಿನಂತೆಯೇ ತಮ್ಮದೂ ಅಂತಿಮ ಕ್ರಿಯೆ ಅಗಬೇಕೆಂದು ಹೇಳಿ ಚಾಮರಾಜ ಪೇಟೆಯ ಸ್ಮಶಾನದಲ್ಲಿ ಇವರ ಪಾರ್ಥಿವ ಶರೀರ ಚಿತೆಗಿಡಲಾಯಿತು. ಇವರ ಜೊತೆ 29 ವರ್ಷಗಳು ಸೇವೆ ಮಾಡಿದ ಶ್ರೀ ಡಿ.ವಿ. ಕೃಷ್ಣಮೂರ್ತಿ ಇವರ ಅಂತಿಮ ಕ್ರಿಯೆಗಳನ್ನು ಮಾಡಿದರು. ಏಳು ಮಡಕೆಗಳಲ್ಲಿ ಅಸ್ತಿ ತೆಗೆದುಕೊಂಡು ಒಂದನ್ನು ಇವರ ಊರಾದ ತಿರುಚಿ ಸಮೀಪದ ಪೊಯ್ಯಾಮಣಿಯಲ್ಲಿ ಭೂಮಿಯಲ್ಲಿ ಸ್ಥಾಪಿಸಿ ಒಂದನ್ನು ತ್ಯಾಗರಾಜನಗರದ ಮಂದಿರದಲ್ಲಿರುವ ಇವರ ಮೂರ್ತಿಯ ಕೆಳಗೆ ಸ್ಥಾಪಿಸಲಾಯಿತು.

ಇವರ ಜನನ ತಿರುಚಿ ಜಿಲ್ಲೆಯ ಪೊಯ್ಯಾಮಣಿಯಲ್ಲಾಗಿತ್ತು. ಶ್ರೀ ಡಿ. ಪುಡಕ್ಕುಡಿ ವೆಂಕಟರಮಣ ಮತ್ತು ಲಕ್ಷ್ಮಿ ಅಮ್ಮಾಳ್ ಅವರ ಐದನೆಯ ಶಿಶುವಾಗಿ ಜನಿಸಿದ್ದರು. ಬಾಲ್ಯದಲ್ಲಿ ಸಾಂಪ್ರದಾಯಿಕ ರೀತಿಯಲ್ಲಿ ಬ್ರಾಹ್ಮಣ ಕುಟುಂಬದಲ್ಲಿ ಬೆಳೆದು, ಪೂಜೆ, ಸಂಧ್ಯಾ ನಿತ್ಯ ಕರ್ಮಗಳನ್ನು ವಿಧಿವತ್ತಾಗಿ ಕಲಿತಿದ್ದರು. ಬಾಲ್ಯದಿಂದಲೂ ಆಧ್ಯಾತ್ಮಿಕ ಪುಸ್ತಕಗಳನ್ನು ಓದುವುದು, ಸಂತ ಪುರುಷರಾದ ಸದಾಶಿವ ಬ್ರಹ್ಮೇಂದ್ರ, ಚೈತನ್ಯ ಪ್ರಭು ರಾಘವೇಂದ್ರ ಸ್ವಾಮಿಗಳಂತಹ ಮಹಾತ್ಮರ ಜೀವನ ಚರಿತ್ರೆಗಳನ್ನು ದಿನ ನಿತ್ಯ ಪಟಿಸುತ್ತಿದ್ದರು. ತಿರುವಣ್ಣಾಮಲೈ ರಮಣ ಮಹರ್ಷಿಗಳನ್ನು ಮತ್ತು ಶ್ರೀ ಶೇಶಾದ್ರಿ ಸ್ವಾಮಿಗಳನ್ನು ಭೇಟಿಯಾಗುವ ಸುಯೋಗ ಲಭಿಸಿತು. ಪೂಜ್ಯ ಶೇಷಾದ್ರಿ ಮಹಾಸ್ವಾಮಿಗಳು ಇವರಿಗೆ ಮೂರು ಕಲ್ಲು ಕೊಟ್ಟು ಅಡಿಗೆ ಮಾಡಿ ತಿನ್ನಲು ಹೇಳಿದ್ದರು. 'ಸತ್ವ', 'ರಜಸ್' ಮತ್ತು 'ತಮಸ್ಸ'ನ್ನು ಮುಟ್ಟಿಯಲ್ಲಿ ಹಿಡಿಯುವ ಸಾಧನೆಯೇ ಈ ಕೆಲಸವಾಗಿತ್ತು. ಅವರು ಗುಣಾತೀತರಾಗಲಿ ಎಂಬುದೇ ರಮಣರ ಇಚ್ಛೆಯಾಗಿತ್ತು. ಶ್ರೀಮಂತರ ಮನೆಯಲ್ಲಿ ಹುಟ್ಟಿದ್ದರಿಂದ ಕೆಲಸ ಹುಡುಕುವ ಅವಶ್ಯಕತೆ ಕಾಣಲಿಲ್ಲ. ಶಾಲೆಯ ಅಭ್ಯಾಸದಲ್ಲಿ ಆಸಕ್ತಿ ಕಡಿಮೆಯೇ ಇತ್ತು. ಇವರಿಗೆ ಕಂಚಿ ಶಂಕರಾಚಾರ್ಯರ ಸಂಪರ್ಕ ಅನೇಕ ಸಲ ಆಗಿತ್ತು. ಕಂಚಿ ಆಚಾರ್ಯರ ಪೂರ್ವಾಶ್ರಮದ ತಮ್ಮ ಪುಣೆಯಲ್ಲಿದ್ದು ಅವರ ಜೊತೆ ಸುತ್ತಮುತ್ತಲ ಮಂದಿರ ಆಶ್ರಮಗಳಿಗೆ ಭೇಟಿ ಮಾಡಿ ಬಹಳ ವಿಷಯ ಸಂಗ್ರಹಿಸಿದರು. ಹಾಗೆಯೇ ಸುತ್ತಾಡುತ್ತ ಪುಣೆ ಹತ್ತಿರ ಒಂದು ಗುಹೆಯಲ್ಲಿ ತಪಸ್ಸು ಮಾಡಿದ್ದರು. ದತ್ತಾತ್ರೇಯ ಭಗವಾನರ ಸಾಕ್ಷಾತ್ಕಾರವಾಗಿ ಇವರಿಗೆ ಜೀವನದಲ್ಲಿ ಗುರುಬಲ ಚೆನ್ನಾಗಿದ್ದು ಮುಂದಿನ ಜೀವನಕ್ಕೆ ಆಶ್ವಾಸನೆ ಲಭಿಸಿತ್ತು. ಊಟಿಗೆ ಬಂದು 20 ವರ್ಷವಿದ್ದು ಮನೆಯವರಿಂದ ಮದುವೆ

ಆಗಲು ಒತ್ತಡ ಹೆಚ್ಚಾಗಿತ್ತು. ತಾಯಿಯ ಕಡೆಯ ಪಾರ್ವತಿ ಎಂಬ ಕನ್ಯೆಯ ಜೊತೆ ಲಗ್ನವಾಯಿತು.

ಈ ಚಿಕ್ಕ ವಯಸಿನಲ್ಲಿ ರೇಸ್ ಕ್ಲಬ್‌ನಲ್ಲಿ ಕೆಲಸಕ್ಕೆ ಸೇರಿ ಬ್ರಿಟಿಷರ ಜೊತೆ ಕೆಲಸ ಮಾಡುತ್ತ ಹಿರಿಯ ಸಂಸ್ಕಾರಸ್ಥರ ಸಂಪರ್ಕವಾಗಿ ಇವರ ಹಾವಭಾವಗಳಲ್ಲಿ ಶಿಸ್ತು ಬೆಳೆಯಿತು. ಅಣ್ಣನ ಜೊತೆಯಿದ್ದು ಆಧ್ಯಾತ್ಮಿಕ ವಿಷಯ ಅವರಿಂದ ತಿಳಿಯಲು ಮತ್ತು ಅವರ ಜೊತೆ ನಿತ್ಯವೂ ಪಾರಮಾರ್ಥಿಕದ ಬಗ್ಗೆ ಸಂಭಾಷಣೆ ನಡೆಯುತ್ತಿತ್ತು. ತಮ್ಮನ್ನೇ ರಾಧಾಕೃಷ್ಣ ಎಂದುಕೊಂಡು ಆಂಡಾಳ್ ಎಂದುಕೊಂಡು ಭಜನೆಯ ಸಮಯ ಗೆಜ್ಜೆ ಕಟ್ಟಿಕೊಂಡು ಕುಣಿಯುತ್ತಿದ್ದರು. ಜೋತಿಷ್ಯಾಸ್ತ್ರ ಕರತಲಾಮಲಕವಾಗಿತ್ತು. ಶಿವನ ಮಂದಿರಕ್ಕೆ ಹೋಗುತ್ತಿದ್ದರು.ಪುರಂದರ ದಾಸರ ಕೀರ್ತನೆ ತ್ಯಾಗರಾಜರ ಕೀರ್ತನೆಗಳನ್ನು ಹಾಡುತ್ತಿದ್ದರು.

ದತ್ತ ಮಂತ್ರ ಉಪದೇಶ ಊಟಿಯಲ್ಲಿ ನಾರಾಯಣ ಮಹಾರಾಜ ರಿಂದ ಪ್ರಾಪ್ತಿಯಾಗಿತ್ತು. ಒಳ್ಳೆಯ ಓದುಗ ಆಗಿದ್ದ ಇವರು ಚೆನ್ನೈನ ಅಡ್ಯಾರಿನಲ್ಲಿರುವ ಥಿಯೋಸೋಫಿಕಲ್ ಸೊಸೈಟಿಗೆ ಬಹುತೇಕ ಸಮಯ ಹೋಗಿ ತಮ್ಮ ಓದುವ ಆಸೆ ಪೂರೈಸಿಕೊಳ್ಳುತ್ತಿದ್ದರು. ಸಂಸ್ಕೃತ ಗ್ರಂಥ 'ಮಂತ್ರ ಮಹೋದಧಿ'ಯನ್ನು ನಿತ್ಯವೂ ಪಠಿಸುವ ಅಭ್ಯಾಸ ಇಟ್ಟು ಕೊಂಡಿದ್ದರು. ಧ್ಯಾನಕ್ಕೆ ಕೂರುವುದಂತೂ ದಿನವೂ ತಿಂಡಿ ಊಟ ಮಾಡುವ ಹಾಗೆ ಅಭ್ಯಾಸದಲ್ಲಿತ್ತು. 1936– 42 ರ ಮಧ್ಯೆ ಮನಸ್ಸು ವ್ಯಾಕುಲಗೊಳ್ಳಲಾಗಿ ಆತ್ಮಸ್ಥೈರ್ಯ ಕಳೆದುಕೊಂಡು ಒಮ್ಮೆ ತಿರುಚಿಯಿಂದ ಮದ್ರಾಸ್‌ಗೆ ಪ್ರಯಾಣ ಮಾಡುವಾಗ ಆತ್ಮಹತ್ಯೆಗೂ ಪ್ರಯತ್ನಿಸಿದ್ದಿದೆ. ಚಿದಂಬರಂ ಹತ್ತಿರ ನದಿಗೆ ಹಾರಲು ಯತ್ನಿಸಿದಾಗ ಯಾರೋ ಹಿಂದೆ ಜೋರಾಗಿ ಎಳೆದ ಹಾಗೆ ಭಾಸವಾಯಿತು. ಹಿಂದೆ ತಿರುಗಿದಾಗ ತಲೆಗೆ ಬಟ್ಟೆ ಕಟ್ಟಿಕೊಂಡಿದ್ದ ವ್ಯಕ್ತಿ ನಿಂತಿದ್ದ. ನಂತರ ತಿಳಿಯಿತು. ಅದು ಸಾಯಿ ಯಲ್ಲದೆ ಬೇರೆ ಯಾರೂ ಅಲ್ಲ. 'ನಿನಗೆ ಮುಂದೆ ಮಾಡಲು ಘನ ಕಾರ್ಯಗಳಿವೆ' ಎಂದಿದ್ದ ಆತ!

1942ರಲ್ಲಿ ಬಿ.ವಿ. ನರಸಿಂಹಸ್ವಾಮಿಯರ ಭೇಟಿಯಾಗಿ ಗುರುವಿನ ಶೋಧನೆ ಅಂತ್ಯವಾಯಿತು. ಅವರ ಪಟ್ಟ ಶಿಷ್ಯರಾದರು. ಮತ್ತೆ ಹಿಂದೆ ನೋಡುವ ಅವಶ್ಯಕತೆ ಬೀಳಲಿಲ್ಲ. 1952ರಲ್ಲಿ ಇವರನ್ನು ಬೆಂಗಳೂರು ಕೆಂದ್ರಕ್ಕೆ ನಿಯಮಿಸಲಾಯಿತು. ಕಂಟೋನ್‌ಮೆಂಟ್‌ನಲ್ಲಿ ಸಾಯಿ ಭಕ್ತರಿದ್ದು ಅಲ್ಲಿರುವ ಅವಕಾಶ ಕೂಡಿಬಂದಿತು. ನಂತರ ಎನ್.ಆರ್. ಕಾಲೊನಿಯ

ಬಸ್ ಸ್ಟಾಪ್ ಹತ್ತಿರ ಮಹಡಿಯಲ್ಲಿ ಇರುವ ವ್ಯವಸ್ಥೆಯಾಯಿತು. ಆ ಮನೆ ಸಾಯಿ ಸ್ಪಿರಿಚುವಲ್ ಸೆಂಟರ್‌ನ ಅಂಗವಾಯಿತು. ಏಳು ವರ್ಷಗಳು ಮಂದಿರ ಸ್ಥಾಪನೆಯ ತನಕ ಅಲ್ಲೇ ಇದ್ದರು.

ಕೆಲವೊಮ್ಮೆ ಗುರುಗಳ ದರ್ಶನವಾಗುತ್ತಿತ್ತು. 1953ರಲ್ಲಿ ಸಾಯಿ ಪಾದಾನಂದ ಎಂಬ ನಾಮಕರಣ ಆಯಿತು. ರಾಧಾಕೃಷ್ಣನ್ ರಾಧಾಕೃಷ್ಣ ಸ್ವಾಮಿ ಆದರು. ಸೌತ್ ಎಂಡ್ ರೋಡ್‌ನಲ್ಲಿ ಭಜನಾ ಮಂಡಲಿ ಸ್ಥಾಪಿಸಿದರು. ರಾಮನವಮಿ ಉತ್ಸವ ಮಾಡಿದರು. ಊಟದ ವ್ಯವಸ್ಥೆಯನ್ನು ಭಕ್ತಾದಿಗಳು ಒದಗಿಸುತ್ತಿದ್ದರು. ಕೆಲವೊಮ್ಮೆ ಉಪವಾಸ ಮಾಡಿದ ಸಂಭವವೂ ಇದೆ. ಪ್ರತಿ ಶನಿವಾರ ತುಮಕೂರಿಗೆ ಹೋಗುತ್ತಿದ್ದರು.

ಸಾಯಿ ಪ್ರೇರಣೆಯಿಂದ ದೊಮ್ಮಲೂರು ಕೃಷ್ಣಮೂರ್ತಿ ಅವರು 1000 ಚದರ ಗಜದ ಜಾಗ 1961ರಲ್ಲಿ ಸಾಯಿ ಪ್ರಚಾರಕ್ಕಾಗಿ ದಾನ ಮಾಡಿದರು. ಶ್ರೀ ವಿ.ಎಸ್. ಶಾಸ್ತ್ರಿ ಹೆಸರಿನಲ್ಲಿದ್ದ ಜಾಗ ಗುರು ಪೂರ್ಣಿಮೆ ದಿನ ಸಿಕ್ಕಿತು. ಒಬ್ಬ ಗುಜರಾತಿ ಉದ್ಯಮಿ ಭಾಯಿ ಪಟೇಲ, ರಾಧಾಕೃಷ್ಣ ಸ್ವಾಮಿಯವರನ್ನು ಭೇಟಿಮಾಡಿ ಹಣ ಸಹಾಯಕ್ಕೆ ಮುಂದೆ ಬಂದರು. ಹಲವಾರು ಭಕ್ತರಿಂದ ಪಟೇಲ ಚಂದಾ ಎತ್ತಿ ಭಜನೆಗೆ ಹಾಲ್ ಮತ್ತು ಎರಡು ರೂಮು ಇರುವಂತೆ ಕಟ್ಟಲು ತಳಪಾಯ ಹಾಕಿಸಿದರು. ದೇಶದ ಎಲ್ಲೆಲ್ಲಿಂದಲೂ ಹಣ ಬರುತ್ತಿತ್ತು. 1965 ರಲ್ಲಿ ಪಾಯದ ಕೆಲಸ ಶುರುಮಾಡಿ 1967ರಲ್ಲಿ ಏಪ್ರಿಲ್‌ರಂದು ಮಂದಿರದ ಸ್ಥಾಪನೆ ಆಯಿತು. ಅದ್ಭುತ ಚಿತ್ರವನ್ನು ಶ್ರೀ ದೊರೈ ಸ್ವಾಮಿ ನೀಡಿ ಶ್ರೀ ವಿ.ವಿ. ಗಿರಿಯವರ ಪತ್ನಿ ಸರಸ್ವತಿ ಉದ್ಘಾಟನೆ ಮಾಡಿದರು. ಆಗ ಗಿರಿ ಕರ್ಣಾಟಕದ ರಾಜ್ಯಪಾಲರಾಗಿದ್ದರು. 1979ರಲ್ಲಿ ಮೈಸೂರ ಸೊಸೈಟಿಯ ರಿಜಿಸ್ಟ್ರೇಷನ್ ಆಕ್ಟ್ ಪ್ರಕಾರ ಅಧಿಕೃತವಾಗಿ ನೊಂದಾಯಿಸಲಾಯಿತು. ಹರ್ಷದ್ ಪಟೇಲ್ ನೀಡಿದ ರಾಧಾಕೃಷ್ಣ ಸ್ವಾಮಿಯವರ ಮೂರ್ತಿ 1972ರಲ್ಲಿ ಸ್ಥಾಪನೆ ಯಾಯಿತು. 1978ರಲ್ಲಿ ಸುವರ್ಣ ಮಹೋತ್ಸವದಲ್ಲಿ ಬಾಬಾರ ಮೂರ್ತಿ ಸ್ಥಾಪಿತವಾಯಿತು. ಅದು ಬಾಬಾರ 60 ವರ್ಷದ ಸಮಾಧಿಯ ಸಮಾರಂಭದ ಮಹೋತ್ಸವವಾಗಿತ್ತು. 1956 ರಲ್ಲಿ ಪೂರ್ಣಿಮೆ ದಿನ ಪೂಜ್ಯ ನರಸಿಂಹ ಸ್ವಾಮೀಜಿಯವರ ಸಮಾಧಿಯಾಗಿತ್ತು. ಈ ಮಂದಿರದ ಹೊರೆ ಶ್ರೀ ರಾಧಾಕೃಷ್ಣಸ್ವಾಮಿಯವರ ಹೆಗಲಿನ ಮೇಲೆ ಹೊರಿಸಿದ್ದರು. ಗುರುವಿನ ಆಸೆಯನ್ನು ಶಿಷ್ಯ ಪೂರೈಸಿದ್ದರು. 1970ರಿಂದ ಸ್ವಾಮಿಗಳು ಆಲ್ ಇಂಡಿಯ ಸಾಯಿ ಸಮಾಜ ನಡೆಸಿಕೊಂಡು ಬಂದಿದ್ದರು.

ಮಹಾಸಮಾಧಿ, ಗುರು ಪೂರ್ಣಿಮ ಇಂತಹ ಸಂದರ್ಭಗಳಲ್ಲಿ ಮದ್ರಾಸ್ ಬೆಂಗಳೂರಿನ ಮಧ್ಯೆ ಜವಾಬ್ದಾರಿ ಹೊತ್ತು ತಿರುಗಾಡುತ್ತಿದ್ದರು. ಆಂಧ್ರ, ಮದ್ರಾಸ್, ಮಹಾರಾಷ್ಟ್ರ ಎಲ್ಲೆಡೆಯಲ್ಲೂ ಅನೇಕ ಮಂದಿರಗಳ ಸ್ಥಾಪನೆ ಕಾರ್ಯ ನಿರಂತರವಾಗಿ ನಡೆಯುತ್ತಿತ್ತು. 1978ರಲ್ಲಿ ಆಲ್ ಇಂಡಿಯಾ ಡಿವೋಟೀಸ್ ಕನ್ವೆನ್ಷನ್ ಪುಣೆಯಲ್ಲಿ ನಡೆಯಿತು. ಮದ್ರಾಸ್‌ನಲ್ಲಿ ನರಸಿಂಹ ಸ್ವಾಮಿಯವರ ಹೆಸರಿನಲ್ಲಿ ಒಂದು ಕಾಟೇಜ್ ಕಟ್ಟಿಸಿದರು.

ರಾಧಾಕೃಷ್ಣ ಸ್ವಾಮಿಯವರು ನಾಮ ಜಪ ಮತ್ತು ವಿಷ್ಣು ಸಹಸ್ರನಾಮ ಪಾರಾಯಣ ಜೀವಿಗಳಿಗೆ ರಕ್ಷಾಕವಚ ಎಂದು ಈ ಸಾಧನೆಯ ಪ್ರಚಾರ ಕೈಗೊಂಡರು. ಭಕ್ತರಿಗೆ ಭಗವದ್ಗೀತೆಯ ಒಂದು ಅಧ್ಯಾಯ ಓದಲು ಹೇಳಿದರು. ವಿಷ್ಣು ಸಹಸ್ರನಾಮ ಪಾರಾಯಣ ಎಲ್ಲರಿಗೂ ರೂಢಿ ಮಾಡಿಸಿದರು. ನರಸಿಂಹ ಸ್ವಾಮೀಜಿಯವರ ಜೀವನದ ಬಗ್ಗೆ ಪುಸ್ತಕ ಬರೆದರು. ಅವರು ಹೇಗೆ ಬಾಬಾರ ನಿಕಟ ಭಕ್ತರ ಸಂಪರ್ಕ ಬೆಳೆಸಿ ಶಿರಡಿಯ ಹಿರಿಮೆ ಜನರಿಗೆ ತೋರಿಸಿದರೆಂದು ಪ್ರಚಾರ ಮಾಡಿದರು. ನರಸಿಂಹ ಸ್ವಾಮಿಗಳು ಮರಾಠಿ ಕಲಿತು ಬಾಬಾ ಬಗ್ಗೆ ಸಂಗ್ರಹಿಸಿದ ವಿವರಗಳ ಬಗ್ಗೆ ವಿವರಿಸಿದರು. ರಾಧಾಕೃಷ್ಣ ಸ್ವಾಮಿಯವರು ತಮ್ಮದೇ ಬುದ್ಧಿವಾದದ ಮಾತುಗಳ ಬಗ್ಗೆ ಭಕ್ತರಿಗೆ ಮನವರಿಕೆ ಮಾಡಿಸಿದರು. ಅವು ಹೀಗಿವೆ:

*ಕುಹಕ ಬುದ್ಧಿಯವರು ಸನ್ಮಾರ್ಗ ಹಿಡಿಯಲಿ*
*ಸಜ್ಜನರಿಗೆ ಶಾಂತಿ ದೊರಕಲಿ*
*ಶಾಂತಿಯಿಂದಿರುವವರಿಗೆ ಬಂಧನದಿಂದ ಮುಕ್ತಿ ದೊರೆಯಲಿ*
*ಮುಕ್ತಿ ಪಡೆದವರು ಇತರರಿಗೆ ಸಹಾಯ ಮಾಡಲಿ*
*ಸರ್ವರೂ ಖಾಯಿಲೆಯಿಂದ ಮುಕ್ತರಾಗಲಿ*
*ಎಲ್ಲರಿಗೂ ಅದೃಷ್ಟ ಪ್ರಾಪ್ತಿಯಾಗಲಿ*
*ಯಾರಿಗೂ ಕಷ್ಟಕಾಲ ಬರದಿರಲಿ*
*ಎಲ್ಲರೂ ಕಷ್ಟ ಎದುರಿಸುವ ಶಕ್ತಿ ಪಡೆಯಲಿ*
*ಎಲ್ಲರಿಗೂ ಒಳ್ಳೆಯ ಭವಿಷ್ಯ ಪ್ರಾಪ್ತವಾಗಲಿ*
*ಎಲ್ಲರಿಗೂ ಅವರು ಪಟ್ಟ ಆಸೆಗಳು ಫಲಿಸಲಿ*
*ಎಲ್ಲರೂ ಎಲ್ಲೆಲ್ಲೂ ಆನಂದದಿಂದಿರಲಿ*

ಸ್ವಾಮೀಜಿ ಒಳ್ಳೆಯ ಜೀವನ ನಡೆಸಿದರು. ನಿರಂತರ ಪ್ರಯಾಣ ದಲ್ಲಿರುತ್ತಿದ್ದರು. ಬಾಬಾರ ಪ್ರೇರಣೆಯಿಂದ ಸ್ಫೂರ್ತಿಗೊಂಡು ಕಾರ್ಯ

ಯಶಸ್ವಿಯಾಗಿ ನಿರ್ವಹಿಸುತ್ತಿದ್ದರು. ಬಾಬಾ ಇವರಿಗೆ ಹೆಚ್ಚು ಜೀವಿಸಿ ಜನಗಳ ಸೇವೆಯಲ್ಲಿ ನಿರತರಾಗಿರಲು ಆದೇಶ ನೀಡಿದ್ದರು.

ಮಂದಿರದಲ್ಲಿ ಗೀತೆಯ ಪಾರಾಯಣ ಸತ್ಸಂಗ ಮಾಡಿಸುತ್ತಿದ್ದರು. ಅವರೂ ಭಾಗವಹಿಸುತ್ತಿದ್ದರು. ಗೀತೆಯ ಶ್ಲೋಕಗಳನ್ನು ಭಕ್ತರಿಗಾಗಿ ಸುಲಲಿತ ಭಾಷೆಗೆ ತರ್ಜುಮೆ ಮಾಡಿ ಬೋಧಿಸುತ್ತಿದ್ದರು. ತಾರಕ ಮಂತ್ರ ಬೋಧನೆ ಮಾಡಿ ರಾಮನ ಭಕ್ತರಾಗಿ ಎಂದು ಉಪದೇಶಿಸುತ್ತಿದ್ದರು. ಅನೇಕರಿಗೆ ಆಶೀರ್ವದಿಸಿ ಬಯಸಿದ ಫಲ ದೊರಕುವಂತೆ ಮಾಡಿರುತ್ತಾರೆ.


ಸ್ವಾಮೀಜಿಯವರಿಗೆ ಮೋನಿಲಿಯಾಸಿಸ್ ಎಂಬ ಗಂಟಲು ಖಾಯಿಲೆ ಆಯಿತು. ಎರಡು ತಿಂಗಳು ಆಹಾರ ಸೇವಿಸಲಾಗುತ್ತಿರಲಿಲ್ಲ. ವೈದ್ಯರಿಗೆ ಭಕ್ತರಿಗೆ ಅವರ ಮನಸ್ಸಿನ ಸಂಕಲ್ಪದ ಅರಿವು ಮೂಡಿತ್ತು. ಭೀಷ್ಮನ ರೀತಿಯಲ್ಲಿ ಜನವರಿ 1980, 14ರಂದು ಸಂಕ್ರಮಣದಂದು ದೇಹತ್ಯಾಗ ಮಾಡಿ ಬಾಬಾರಲ್ಲಿ ಲೀನವಾದರು. ಉತ್ತರಾಯಣಕ್ಕಾಗಿ ಕಾಯುತ್ತಿದ್ದರು. ಭಕ್ತರ ಜೊತೆ ವಿಷ್ಣು ಸಹಸ್ರನಾಮ ಓಂ ನಮೋ ನಾರಾಯಣ ಜಪ ಮಾಡುತ್ತಿದ್ದರು. ಕಡೆಯ ಉಸಿರಿನ ತನಕ ಜಪ ನಡೆಯುತ್ತಿತ್ತು. ಚಿತೆಯ ಕೆಲಸ ಮಾರನೆ ದಿನ ನಡೆಯಿತು.

ಭಕ್ತರಿಗೆ ಅವರ ಆಶೀರ್ವಾದ ಲಭಿಸಿತ್ತು. ಅವರ ಜೀವನ ನಂತರವೂ ಅವರ ಕೃಪೆ ಭಕ್ತರಿಗೆ ಕುಂದುವ ಮಾತಿಲ್ಲ. ಸ್ವಾಮಿಯವರು ಬರೀ ದೇಹದಲ್ಲಿದ್ದ ಚೈತನ್ಯವಾಗಿರಲಿಲ್ಲ. ನಂತರವೂ ಅವರ ಅಸ್ತಿತ್ವ ಭಕ್ತರ ಮನಸ್ಸು ಹೃದಯದಲ್ಲಿವೆ. ಅನೇಕರಿಗೆ ಸ್ವಪ್ನ ದರ್ಶನ ನೀಡುತ್ತಿರುತ್ತಾರೆ. 'ನಾನಿರುವಾಗ ನೀನೇಕೆ ಹೆದರುವೆ' ಎಂಬುದೇ ಅವರು ಭಕ್ತರಿಗೆ ಬಿಟ್ಟ ಮಾತು.

ಪವಿತ್ರ ತ್ರಿಮೂರ್ತಿಗಳಾದ ಸಾಯಿಬಾಬಾ ನರಸಿಂಹ ಸ್ವಾಮಿ ರಾಧಾಕೃಷ್ಣ ಸ್ವಾಮಿ ಎಲ್ಲರಿಗೂ ತಮ್ಮ ಕೃಪೆ ತೋರಿಸುತ್ತಿರಲಿ. ಶಾಂತಿ ಸಾಮರ್ಥ್ಯ ಆನಂದ ಎಲ್ಲರಿಗೂ ಪ್ರಾಪ್ತವಾಗುತ್ತಿರಲಿ.

## ಶ್ರೀ ರಾಧಾಕೃಷ್ಣ ಸ್ವಾಮಿಗಳ ಸಂಪರ್ಕದಲ್ಲಿ ಬಂದಂತಹ ಸಂತರು


### ಕಂಚಿ ಕಾಮಕೋಟಿ ಮಠದ ಮಹಾಪೆರಿಯವ



ಕಂಚಿ ಆಚಾರ್ಯರು ಶ್ರೀ ರಾಧಾಕೃಷ್ಣ ಸ್ವಾಮಿಯವರ ಜೀವನದಲ್ಲಿ ಬಹಳ ಪ್ರಭಾವ ಬೀರಿದವರಲ್ಲಿ ಶ್ರೇಷ್ಠರು ಜಗದ್ಗುರುಗಳನ್ನು ಅನೇಕ ಬಾರಿ ಭೇಟಿ ಮಾಡಿ ಆಶೀರ್ವಾದ ಪಡೆದಿದ್ದರು. ಜಗದ್ಗುರುಗಳ ಪೂರ್ವಾಶ್ರಮದ ತಮ್ಮ ಪುಣೆಯಲ್ಲಿ ಕೆಲಸ ಮಾಡುತ್ತಿದ್ದು ಸ್ವಾಮಿಯವರು ಪುಣೆಯಲ್ಲಿ ಅವರ ಜೊತೆ ಸಮಯ ಕಳೆದು ಸುತ್ತಮುತ್ತಲ ಮಂದಿರಗಳನ್ನೂ ಆಶ್ರಮಗಳನ್ನೂ ತಲುಪಿ ಅನೇಕ ಆಧ್ಯಾತ್ಮಿಕ ವಿಷಯ ಸಂಗ್ರಹಿಸಿದ್ದರು. ಗುರುಗಳು ಇವರ ಬಾಲ್ಯದಲ್ಲಿ ಅನೇಕ ಸಲ ಇವರ ಜನ್ಮ ಸ್ಥಳವಾದ ಪೊಯ್ಯಾಮಣಿಗೆ ಭೇಟಿ ಮಾಡಿದ್ದರು.



ಶೃಂಗೇರಿ ಜಗದ್ಗುರು ಪೂಜ್ಯ ಚಂದ್ರಶೇಖರ ಭಾರತಿಗಳು ಇವರಲ್ಲಿ ಗುರುವಾಗುವ ಭವಿಷ್ಯ ತಿಳಿದು ಇವರಿಗೆ ಸಂನ್ಯಾಸದ ವಸ್ತ್ರ ನೀಡಿ ಆಶೀರ್ವದಿಸಿದ್ದರು. ಆದರೆ ಶ್ರೀ ರಾಧಾಕೃಷ್ಣ ಸ್ವಾಮಿಗಳು ಅದನ್ನು ಎಂದಿಗೂ ಧರಿಸದೆ ಹಾಗೆಯೆ ಕಾಪಾಡುತ್ತಿದ್ದರು.



### ಖೇಡಗಾವ್‌ನ ನಾರಾಯಣ ಮಹಾರಾಜರು

ಶ್ರೀ ನಾರಾಯಣ ಮಹಾ ರಾಜರು ರಾಧಾಕೃಷ್ಣ ಸ್ವಾಮಿಗಳಿಗೆ 1927 ರಲ್ಲಿ ಊಟಿಯಲ್ಲಿ ದತ್ತ ಮಂತ್ರ ಉಪದೇಶ ಮಾಡಿದರು.



ರಮಣ ಮಹರ್ಷಿಗಳ ದರ್ಶನ ಮಾಡಿದ್ದರು.


### ಶೇಷಾದ್ರಿ ಸ್ವಾಮಿಗಳ್ ತಿರುವಣ್ಣಾಮಲೈ

ರಾಧಾಕೃಷ್ಣ ಸ್ವಾಮಿಗಳು ತಿರುವಣ್ಣಾಮಲೈ ತಲುಪಿದಾಗ ಶ್ರೀ



ಶೇಷಾದ್ರಿ ಮಹಾಸ್ವಾಮಿಗಳು ಇವರಿಗೆ ಮೂರು ಕಲ್ಲುಗಳನ್ನು ಕೊಟ್ಟು ಬೇಯಿಸಿ ತಿನ್ನಲು ಹೇಳಿದ್ದರು. ಆ ಮೂರು ಕಲ್ಲುಗಳೇ 'ಸತ್ವ', 'ರಜಸ್' ಮತ್ತು 'ತಮಸ್' ಆಗಿದ್ದವು.

**ಶ್ರೀ ಶಿವಾನಂದ ಸ್ವಾಮಿ, ಋಷಿಕೇಶ**



ಶ್ರೀ ಶಿವಾನಂದ ಸ್ವಾಮಿಗಳು ಇವರನ್ನು ಕಂಡು ಬಹಳವೇ ಪ್ರಸನ್ನರಾಗಿ 1950ರಲ್ಲಿ ಇವರ ಗುರುಗಳಾದ ಪೂಜ್ಯ ನರಸಿಂಹ ಸ್ವಾಮಿಯವರಿಗೆ ತಮ್ಮ ಆಶ್ರಮಕ್ಕೆ ಸೇವೆ ಸಲ್ಲಿಸಬೇಕೆಂದು ಕೇಳಿಕೊಂಡರು.

**ಗುಬ್ಬಿ ಶ್ರೀ ಚಿದಂಬರ ಸ್ವಾಮಿಗಳು**




ಚಿದಂಬರ ಸ್ವಾಮಿಗಳಿಗೆ ಶ್ರೀ ರಾಧಾಕೃಷ್ಣ ಸ್ವಾಮಿಗಳ ಮೇಲೆ ಬಹಳ ಪ್ರೇಮವಿತ್ತು. ಒಮ್ಮೆ ಗುಬ್ಬಿ ಶ್ರೀಗಳ ಆರೋಗ್ಯ ವಿಪರೀತಕ್ಕೆ ತಲುಪಿದಾಗ ಸ್ವಾಮಿಗಳು ಪ್ರಾರ್ಥನೆ ಮಾಡಿ ಅವರು 1967ರ ವರೆವಿಗೆ ಬದುಕಿದ್ದರು.



ಆನಂದಮಯಿ ಮಾತಾಜಿ ಕೊಲ್ಕೊತ್ತಾದಿಂದ ಇವರನ್ನು 1979 ರಲ್ಲಿ ಬಂದು ಬೆಂಗಳೂರಿನಲ್ಲಿ ಭೇಟಿ ಮಾಡಿದ್ದರು. ಅದೇ ಅವರ ಕಡೆ ಭೇಟಿ. ಅದಕ್ಕೆ ಮುಂಚೆ ಶ್ರೀ ರಾಧಾಕೃಷ್ಣ ಸ್ವಾಮಿಯವರು ಕೊಲ್ಕೊತ್ತಾಗೆ ಪ್ರಚಾರ ಕಾರ್ಯಕ್ಕೆ ಹೋದಾಗ ಮಾತಾಜಿಯವರನ್ನು ಕಂಡಿದ್ದರು.

**ಶಿವಮೊಗ್ಗದ ಶ್ರೀಧರ ಸ್ವಾಮಿಗಳು**



ಇವರು ಎಲ್ಲೂ ಎರಡು ದಿನಕ್ಕಿಂತ ಹೆಚ್ಚು ತಂಗುತ್ತಿರಲಿಲ್ಲ. ಗುರುಗಳು ಬೆಂಗಳೂರಿಗೆ ಬಂದಾಗ ವಸಂತಪುರ ಅಥವಾ ತ್ಯಾಗರಾಜನಗರದಲ್ಲಿ ಇಬ್ಬರು ಮಹಾತ್ಮರ ಭೇಟಿಯಾಗುತ್ತಿತ್ತು. ಶ್ರೀಧರ ಸ್ವಾಮಿಗಳು 1973ರಲ್ಲಿ ನಿರ್ವಾಣ ಹೊಂದಿದರು.

**ಪುಣೆಯ ಸಾಧು ವಾಸ್ವಾನಿ**



ರಾಧಾಕೃಷ್ಣ ಸ್ವಾಮಿಗಳು ಯುವಕಾವಸ್ಥೆಯಲ್ಲಿ ಪುಣೆಯಲ್ಲಿದ್ದಿದ್ದರಿಂದ ಕೆಲವು ಸಲ ಶ್ರೀ ವಾಸ್ವಾನಿಯವರನ್ನು ಭೇಟಿ ಮಾಡಿದ್ದರು.

**ಬೆಂಗಳೂರಿನ ಶಿವಬಾಲ ಯೋಗಿ**



ರಾಧಾಕೃಷ್ಣಸ್ವಾಮಿಗಳು ಶ್ರೀ ಶಿವಬಾಲಯೋಗಿಗಳ ಹತ್ತಿರ ಸಂಪರ್ಕ ಬೆಳೆಸಿ ಹಲವಾರು ಬಾರಿ ಇಬ್ಬರೂ ಭೇಟಿ ಮಾಡಿದ್ದರು.

**ನರಸಿಂಹ ಸ್ವಾಮಿಯವರ ಜೊತೆ**




ರಾಧಾಕೃಷ್ಣಸ್ವಾಮಿಯವರು ಗುರುವನ್ನು ಹುಡುಕುತ್ತಿದ್ದಾಗ 1942 ರಲ್ಲಿ ಶ್ರೀ ಬಿ.ವಿ. ನರಸಿಂಹ ಸ್ವಾಮಿಯವರನ್ನು ಭೇಟಿಮಾಡಿ ಅವರಿಗೆ ನಿಕಟರಾಗಿ ಅವರ ಸಾಯಿ ಪ್ರಚಾರ ಕಾರ್ಯದಲ್ಲಿ ಬಹಳವೇ ಮುತುವರ್ಜಿ ವಹಿಸಿ



ಕೆಲಸ ಮಾಡಿ ಅವರ ಪ್ರೇಮಕ್ಕೆ ಪಾತ್ರರಾಗಿ ಅವರ ಶಿಷ್ಯರಾದರು. ಅವರ ನಂತರ ಅವರ ಕೆಲಸ ಕಾರ್ಯಗಳ ಜವಾಬ್ದಾರಿ ಎಲ್ಲಾ ವಹಿಸಿ ಕೊಂಡು ತಮ್ಮ ಕೊನೆಯುಸಿರಿನವರೆಗೆ ಸಾಯಿ ಪ್ರಚಾರ ಕಾರ್ಯದಲ್ಲಿ ನಿರತರಾಗಿದ್ದರು.

# ಶ್ರೀ ಶಿವನೇಶನ್ ಸ್ವಾಮಿ

**27.4.1927 –12.2.1996**



ಗುಂಪಿನಲ್ಲಿ ಓಂ ಸಾಯಿ ಶ್ರೀ ಸಾಯಿ ಜೈ ಜೈ ಸಾಯಿ ಜಪ ಶುರು ಮಾಡಿಸಿದವರು ಇವರೇ. ಗುರುಸ್ಥಾನದ ಪ್ರದಕ್ಷಿಣೆ, ನಂದಾದೀಪದ ಮಹತ್ವ ಮತ್ತು ದತ್ತಮಂದಿರದ ಮಹತ್ವ ತಿಳಿ ಹೇಳಿದವರು. ಶಿರಡಿಗೆ ಬರುವ ಭಕ್ತರಿಗೆ. ಬಾಬಾರ ಸನ್ನಿಧಿಯಲ್ಲಿ 45 ವರ್ಷ ಜೀವನ ನಡೆಸಿದರು.

40 ವರ್ಷಕ್ಕೂ ಹೆಚ್ಚು ಗುರುಸ್ಥಾನ ಚಾವಡಿ ದ್ವಾರಕಾ ಮಾಯಿಯಲ್ಲಿ ಬೆಳಗಿನಿಂದ ಸಂಜೆಯವರೆವಿಗೆ ಸೇವೆ ಮಾಡುತ್ತ ಬರುವ ಭಕ್ತಾದಿಗಳಿಗೆ ಈ ಜಾಗಗಳ ಮಹತ್ವ ತಿಳಿಸುತ್ತಿದ್ದರು. ದೇಶದೆಲ್ಲೆಡೆಯೂ ಸಾಯಿ ಮಂದಿರದ ಸ್ಥಾಪನೆ ಮಾಡಲು, ಭಕ್ತಾದಿಗಳಿಂದ ನಾಮ ಸಪ್ತಾಹ, ಲಿಖಿತ ಜಪ ಮಾಡಲು ಹುರಿದುಂಬಿಸುತ್ತಿದ್ದರು. ಭಕ್ತರ ಅನುಭವಗಳ ಪುಸ್ತಕ ಬರೆಯಲು ಪ್ರೇರೇಪಿಸುವುದು, ಇರುವ ಪುಸ್ತಕಗಳನ್ನು ಭಾಷಾಂತರಿಸುವುದು, ಸಾಯಿ ಮಂದಿರಗಳಲ್ಲಿ ಧುನಿ ಸ್ಥಾಪಿಸುವುದು, ಇನ್ನಿತರ ಕಾರ್ಯಗಳನ್ನು ಹುರಿದುಂಬಿಸುತ್ತಿದ್ದರು. ಚಾವಡಿಯಲ್ಲಿ ಸಂಜೆ ಎಂಟುಗಂಟೆ ಭಜನೆ ಹೇಳುತ್ತಿರುತ್ತಿದ್ದರು. ದ್ವಾರಕಾಮಾಯಿಯಲ್ಲಿ ಧುನಿಗೆ ತೆಂಗಿನಕಾಯಿ ಅರ್ಪಿಸುವುದನ್ನು ಅಭ್ಯಾಸ ಮಾಡಿಸಿದ್ದರು. ಬಡವರಿಗೆ ಪ್ರಸಾದದ ಕೂಪನ್ ಕೊಡುತ್ತಿದ್ದರು.

ಶ್ರೀಮತಿ ಅಲಮೇಲು ಶ್ರೀ ಮುತ್ತಯ್ಯ ದಂಪತಿಗಳ ಮೂರನೇ ಶಿಶುವಾಗಿ 12.4.1927 ರಾಮನವಮಿಯಂದು ಕೊಯಿಂಬತ್ತೂರು

ಜಿಲ್ಲೆಯ ಪಾಲಯಂನಲ್ಲಿ ಜನಿಸಿದರು. ಅವರಿಗೆ ಜನಿಸುವಾಗ ಎರಡು ಹಲ್ಲುಗಳಿದ್ದು ಜುಟ್ಟು ತಲೆಯಲ್ಲಿತ್ತು. ಸಂಸಾರಸ್ಥನಾಗಿ, ನಂತರ ಸಂನ್ಯಾಸಿ ಯಾಗುವನೆಂದು ಭವಿಷ್ಯ ನುಡಿಯಲಾಗಿತ್ತು. ಒಬ್ಬನೇ ಇರಲು ಇಷ್ಟಪಡುತ್ತ ವಿರಕ್ತನಾಗಿ ಸಂಸಾರದ ಯಾವ ಸಾಧನೆಯಲ್ಲೂ ಮನಸ್ಸು ಹರಿಯಲಿಲ್ಲ. ತಾಯಿ ಕಡೆ ಅಜ್ಜಿಯ ಜೀವನದ ನೆನಪು ಮತ್ತು ಚಿಕ್ಕಪ್ಪನಲ್ಲಿದ್ದ ಪುಸ್ತಕಗಳು ಬಹಳ ಪ್ರಭಾವ ಬೀರಿತ್ತು ಈ ಬಾಲಕನ ಮೇಲೆ. ಎಂಟನೆಯ ತರಗತಿ ಯಿಂದ ಮುಂದೆ ಹೋಗಲಿಲ್ಲ. ಮೊದಲಿನ ದಿನಗಳಲ್ಲಿ ನಾಸ್ತಿಕನಂತೆ ಇದ್ದು ನಂತರದಲ್ಲಿ ಬಾಬಾ ಭಕ್ತನಾದರು.

ಸ್ವಲ್ಪ ಸಮಯ ಮದ್ರಾಸ್ ನ್ಯಾಯಾಲಯದಲ್ಲಿ ರಿಕಾರ್ಡ್ ಕೋಣೆಯಲ್ಲಿ ಹಂಗಾಮಿ ಗುಮಾಸ್ತನಾಗಿದ್ದ. ನಂತರ ಕೊಯಿಂಬತ್ತೂರಿನ ವಿದ್ಯುತ್ ಇಲಾಖೆಯಲ್ಲಿ ದಿನಗೂಲಿ ಕೆಲಸ ನಿರ್ವಹಿಸುತ್ತಿದ್ದರು. ಸೂಕ್ತ ವಯಸ್ಸಾಗದ ಕಾರಣ ಸರಕಾರಿ ಅಧಿಕಾರಿಗಳು ಬಂದಾಗ ಪಕ್ಕದ ಜಮೀನುಗಳಲ್ಲಿ ಮುಚ್ಚಿಟ್ಟುಕೊಳ್ಳುತ್ತಿದ್ದರು. ನಂತರ ಒಂದು ಪುಸ್ತಕದ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದರು. ಓದುವ ಹವ್ಯಾಸ ಇದ್ದಿದ್ದರಿಂದ ಅನುಕೂಲವೇ ಆಯಿತು. ಕೆಲಸ ಮಾಡುವುದಕ್ಕಿಂತ ಓದುತ್ತಿದ್ದರಾದ ಕಾರಣ ಕೆಲಸ ಹೋಯಿತು.

ತಾಯಿ ನಿಧನದ ನಂತರ ಮನೆ ಬಿಟ್ಟವನು ಮತ್ತೆ ಹಿಂದೆ ತಿರುಗದೆ ಆಧ್ಯಾತ್ಮದ ಕಡೆ ಒಲವಾಗಿ ಮುಂಬೈ ಸೇರಿ ಓಡಾಡುತ್ತಿದ್ದ. ಆಗ ವಯಸ್ಸು 17. ಕೈಗೆ ಸಿಕ್ಕ ಕೆಲಸ ಮಾಡುತ್ತಿದ್ದು ರೈಲ್ವೇ ಪೋರ್ಟರ್ ಆಗಿಯೂ ಕಾರ್ಯ ನಿರ್ವಹಿಸಿದರು. ಕೆಲವು ವೇಳೆ ಸಮುದ್ರದ ತೀರದಲ್ಲಿ ಧ್ಯಾನಮಗ್ನ ನಾಗಿರುತ್ತಿದ್ದ ಸಮಯದಲ್ಲಿ ಕೊಯಿಂಬತ್ತೂರಿನ ಪುತ್ತಯ್ಯ ಸ್ವಾಮೀಜಿ ಗೃಹಸ್ಥ ಆಗಿದ್ದೂ ಸಂನ್ಯಾಸ ಜೀವನ ಮಾಡುತ್ತಿದ್ದವರ ಭೇಟಿಯಾಗಿ ಅವರ ಜೊತೆಯಿದ್ದು ಧ್ಯಾನ ವೇದ ಪಾಠ ಕಲಿಯಲು ಅವಕಾಶವಾಯಿತು. ಕೆಲವು ಸಮಯದ ನಂತರ ವಜ್ರೇಶ್ವರಿಯ ಪೂಜ್ಯ ನಿತ್ಯಾನಂದ ಸ್ವಾಮಿಗಳ ಆಶ್ರಮ ಸೇರಿದರು. ಸ್ವಲ್ಪ ಸಮಯ ಸಾಧನೆ ಮಾಡಿ ನಾಸಿಕ್‌ನ ತ್ರಯಂಬಕೇಶ್ವರದಲ್ಲಿ ಮೌನಿ ಬಾಬಾರ ಆಶ್ರಯ ಪಡೆದರು. 1963ರಲ್ಲಿ ಶಿರಡಿ ತಲುಪಿದರು.

ಅಲ್ಲಿಯೂ ಜೀವನವೇನೂ ಸುಖಮಯವಾಗಿರಲಿಲ್ಲ. ತಿನ್ನಲು ಆಹಾರ ಸಿಗುತ್ತಿರಲಿಲ್ಲ. ಕೆಲವು ಸಲ ಟೀ ಕುಡಿದು ಹೂವುಗಳನ್ನು ತಿಂದು ಜೀವನ ಮುಂದುವರಿಸಿದ. ಬಾಬಾರ ಕೃಪೆಯಿಂದ ಇರಲು

ಕೊಠಡಿ ಮತ್ತು ದಿನವೂ ಆಹಾರ ಸಿಗುವ ಸ್ಥಿತಿ ಬಂದಿತು. ಶಿರಡಿಗೆ ಬಂದಾಗ ಜೊತೆಯಲ್ಲಿ ತಂದ ಪುಸ್ತಕಗಳಿದ್ದವು. ಹೆಚ್ಚು ಕಾಲ ಧ್ಯಾನ ದಲ್ಲಿರುತ್ತಿದ್ದು ಭಕ್ತಾದಿಗಳಿಗೆ ದ್ವಾರಕಾಮಾಯಿ ಗುರು ಸ್ಥಾನ ತೋರಿಸಿ ಆ ಜಾಗಗಳ ಮಹತ್ವ ಹೇಳುತ್ತಿದ್ದರು. ಚಾವಡಿ ಕೇವಲ ಗುರುವಾರ ತೆರೆದಿರುತ್ತಿತ್ತು. ದ್ವಾರಕಾಮಾಯಿಯಲ್ಲಿ ಸೇವೆ ನಿರಂತರ ನಡೆಸುತ್ತಿದ್ದ. ಸಮಯ ಸಿಕ್ಕಾಗಲೆಲ್ಲಾ ಧ್ಯಾನಮಗ್ನರಾಗಿರುತ್ತಿದ್ದರು.

ಧುನಿಯನ್ನು ನೋಡುತ್ತಿದ್ದರೆ ಅದರಿಂದ ಬಟ್ಟೆ ಬೇಗ ಗಲೀಜಾಗು ತ್ತಿತ್ತು. ಆದರೆ ತನ್ನ ಇರುವಿಕೆಯ ಪರಿವೆ ಇಲ್ಲದಾಗಿತ್ತು. ಬಾಬಾರ ಚಿತ್ರಗಳಲ್ಲಿ ಹಣೆಗೆ ತಿಲಕ ಇಡುವುದು, ದೀಪಗಳನ್ನು ಹಚ್ಚುವುದು ನಿತ್ಯದ ಕೆಲಸವಾಗಿತ್ತು. ಇವರ ಸೇವೆ ನೋಡಿ ಅಧಿಕಾರಿಗಳು ಒಂದು ಕೋಣೆಯಲ್ಲಿ ಮಲಗಲು ಅನುಮತಿ ನೀಡಿದರು. ಅನೇಕ ಭಾಷೆಗಳು ತಿಳಿದಿದ್ದರಿಂದ ಸಂಭಾವನೆ ಕಳಿಸಿದ ಭಕ್ತರಿಗೆ ಹೊರ ಊರುಗಳಿಗೆ ರಶೀತಿ ಕಳಿಸುವ ಲಕೋಟೆಗಳ ಮೇಲೆ ಹೆಸರು ಬರೆಯುವ ಕೆಲಸ ನಿರ್ವಹಿಸಿದರು. ತಿಂಗಳಿಗೆ 15 ರುಪಾಯಿ ಸಂಭಾವನೆ ನೀಡುತ್ತಿದ್ದರು. ಕೆಲವು ಸಮಯದ ನಂತರ ಚಾವಡಿಗೆ ಭಕ್ತರು ಹೆಚ್ಚಾಗಿ, ಚಾವಡಿ ದಿನವೂ ತೆಗೆದಿರುತ್ತಿದ್ದಾಗ ಚಾವಡಿ ಅಲಂಕರಿಸುವುದು, ಸ್ವಚ್ಛವಾಗಿಡುವುದು, ನೋಡಿಕೊಳ್ಳಬೇಕಾಯಿತು. ಗುರುವಾರದ ದಿನ ಚಾವಡಿಯಿಂದ ದ್ವಾರಕಾಮಾಯಿಗೆ ಪಾಲ್ಕಿ ಯಾತ್ರೆಗೆ ಮಾಡಬೇಕಾದ ವ್ಯವಸ್ಥೆ ನೋಡಿಕೊಳ್ಳುತ್ತಿದ್ದರು. ಆಗ ಸಂಸ್ಥಾನದಿಂದ ಊಟವೂ ಸಿಗುತ್ತಿತ್ತು.

ಹೊರಗಿನಿಂದ ಪ್ರಮುಖ ಭಕ್ತರನ್ನು ಮಂದಿರದ ಒಳಗೆ ಕರೆದುಕೊಂಡು ಹೋಗುವುದು, ಅವರಿಗೆ ಚಿತ್ರ ತೆಗೆದುಕೊಳ್ಳಲು ಅನುಮತಿ ನೀಡಿಸುವುದು ನೋಡಿಕೊಳ್ಳುತ್ತಿದ್ದರು. ಬಂದ ಭಕ್ತರಿಗೆ ಅಲ್ಲಿಯ ಮಹತ್ವದ ವಿಷಯ ತಿಳಿಸುವುದು, ಯಾವ ಪುಸ್ತಕ ಅವರಿಗೆ ಸೂಕ್ತ ಎಂದು ಹೇಳುವುದು, ಧ್ಯಾನದ ಕ್ರಮಗಳಿಗೆ ಮಾರ್ಗದರ್ಶನ ನೀಡುವುದು ತನ್ನ ಸ್ವಂತ ಇಚ್ಛೆಯಿಂದಲೇ ಮಾಡುತ್ತಿದ್ದರು. ಸಂಸ್ಥಾನದ ಲೈಬ್ರರಿಯಲ್ಲಿದ್ದ ಸಾಯಿಲೀಲಾ ಓದಿ ಬಹಳ ವಿಷಯ ತಿಳಿದುಕೊಂಡು ಭಕ್ತರಿಗೆ ಸೂಕ್ತ ಸಲಹೆ ನೀಡುತ್ತಿದ್ದರು. ಹೊರಗಿನಿಂದ ಬರುವವರಲ್ಲಿ ಒಂದು ತನ್ನದೇ ಸ್ಥಾನ ಸ್ಥಾಪಿಸಿಕೊಂಡರು. ಅವರುಗಳಿಗೆ ಅವರ ಗ್ರಾಮದಲ್ಲಿ ಮಂದಿರ ಸ್ಥಾಪಿಸಲು ಪ್ರೋತ್ಸಾಹ ನೋಡಿ ಬೇಕಾದ ಸಹಾಯ ಮಾಡಿ, ಇನ್ನೂ ಹೆಚ್ಚು ಪ್ರಸಿದ್ಧರಾದರು. ಬಂದಂತಹ ಭಕ್ತರಿಗೆ ಸಾಯಿಲೀಲ ಪತ್ರಿಕೆಯನ್ನು

ಇಂಗ್ಲಿಷ್, ಕನ್ನಡ, ಹಿಂದಿ, ತಮಿಳು, ತೆಲಗು, ಬೆಂಗಾಳಿ ಭಾಷೆಗಳಲ್ಲಿ ಭಾಷಾಂತರಿಸಲು ಪ್ರೋತ್ಸಾಹ ಮಾಡುತ್ತಿದ್ದರು. ಅವರ ಕೆಲಸವೇ ಒಂದಲ್ಲ ಒಂದು ರೀತಿ ಸಾಯಿ ಮಹಿಮೆಯ ಪ್ರಚಾರ. ಬಂದವರಿಗೆ ಮಾತಾಡಿ ಅವರ ಊರುಗಳಲ್ಲಿ ಅವರಿಂದ ಸಾಯಿ ಪ್ರಚಾರ ಮಾಡುವಂತಾಗಿ ಸಾಯಿಯ ಮಹಿಮೆ ಎಲ್ಲೆಲ್ಲೂ ಜನಗಳಿಗೆ ಅರಿವಾಗುವ ಹಾಗೆ ಆಯಿತು. ಅವರಿಗೆ ಸಮೂಹದಲ್ಲಿ ಅಖಂಡ ಜಪ ಮಾಡಿಸುವುದು, ನಿತ್ಯ ಸಾಯಿ ಪೂಜೆ ಮಾಡಿಸುವುದು ಕಲಿಸುತ್ತಿದ್ದರು.

ಅವರ ಜೀವನ ಬಹಳ ಸಾಮಾನ್ಯವಾಗಿರುತ್ತಿತ್ತು. ತಲೆಗೆ ಸುತ್ತಿದ್ದ ಒಂದು ಬಟ್ಟೆ ಸೊಂಟಕ್ಕೆ ಸುತ್ತಿ ಕಟ್ಟಿದ್ದ ಟವೆಲ್, ಮೈಮೇಲೆ ಮಹಾ ರಾಷ್ಟ್ರಿಯನ್ ಜುಬ್ಬ. ತಾನು ನೆಲದ ಮೇಲೆ ಮಲಗುತ್ತಿದ್ದರೂ ಬಂದವರಿಗೆ ಬ್ಲಾಂಕೆಟ್, ದಿಂಬು ಹೊಂದಿಸುತ್ತಿದ್ದರು. ಕುಳಿತುಕೊಳ್ಳುವ ಸ್ಥಳದಲ್ಲಿ ಒಂದು ಗೋಣಿಚೀಲವಿರುತ್ತಿತ್ತು. ಗಾಳಿ ಮಳೆಯ ಪರಿವೆಯಿರಲಿಲ್ಲ! ತಾನು ಬರಿ ಕಾಲಿನಲ್ಲಿ ನಡೆಯುತ್ತಿದ್ದರೂ ಬಂದವರಿಗೆ ತನಗೆ ಯಾರಾದರೂ ಕೊಟ್ಟ ಛತ್ರಿ ನೀಡುತ್ತಿದ್ದರು.

ಧ್ವನಿ ಸುಶ್ರಾವ್ಯವಾಗಿದ್ದು ಭಜನೆ ಹೇಳಿದಾಗ ಭಕ್ತಾದಿಗಳು ಆನಂದ ಪಡುತ್ತಿದ್ದರು. ಇವರೇ ಮಾಡಿದ ಭಜನೆಗಳನ್ನು ಜನರು ತಮ್ಮ ಭಾಷೆಯಲ್ಲಿ ಮುದ್ರಿಸುತ್ತಿದ್ದರು. ಆದರೆ ಇವರ ಕೈಲಿ ಬರೆದಿರುವ ಅಥವಾ ಮುದ್ರಿತ ಯಾವ ಪುಸ್ತಕವೂ ಕಾಣಬರದು.

ರೋಗಪೀಡಿತರಿಗೆ ಗುರಸ್ಥಾನದ ನಂದಾದೀಪದ ಪ್ರದಕ್ಷಿಣೆ ಮಾಡಿ ಅವರಿಗೆ ಆಗುವ ಅನುಭವ ಕೇಳುವುದರಲ್ಲಿ ಆನಂದ ಪಡುತ್ತಿದ್ದರು. ಧುನಿಪೂಜೆ, ಸತ್ಯನಾರಾಯಣ ಪೂಜೆಗಳನ್ನು ಪ್ರೋತ್ಸಾಹಿಸುತ್ತಿದ್ದರು.

ದೇವಿ ಮಾಯಿ ಸೇಲಂನ ಅಮ್ಮ ಪಾದಸಿಂಗದ ವೈದೇಹಿ, ಅನಸೂಯ ಮಾತ ಇವರ ಮಹಿಮೆ ಹೇಳುವುದರಲ್ಲಿ ಆನಂದ ಪಡುತ್ತಿದ್ದರು. ಅವರನ್ನು ಸಂಪರ್ಕಿಸಲು ಸಲಹೆ ನೀಡುತ್ತಿದ್ದರು. ಇವರು ಮಾಡಿದ ನಲವತ್ತೈದು ವರ್ಷ ನಿಸ್ವಾರ್ಥ ಸೇವೆ, ಆಗಿನ ಸಮಯ ಬಂದ ಭಕ್ತಾದಿಗಳಿಗೆ ಹೃದಯದಲ್ಲಿ ಅಚ್ಚಾಗಿ ಉಳಿದಿದೆ. 12.2.1996 ರಲ್ಲಿ ಕೊನೆಯುಸಿರೆಳೆದರು. ಆ ಸಮಯ ದ್ವಾರಕಾಮಾಯಿಯ ಗಂಟೆ ಅಲ್ಲಾಡುತ್ತಿತ್ತೆಂದು ಹೇಳುತ್ತಾರೆ. ಅವರ ಅಸ್ತಿಯ ಕಳಶ, ಶಿರಡಿಯಲ್ಲಿ ಪಿಂಪಲವಾಡಿ ರಸ್ತೆಯಲ್ಲಿ ಎರಡೂವರೆ ಕಿ.ಮೀ. ದೂರದಲ್ಲಿರುವ ಪ್ರಸಾದಾಲಯದ ಹತ್ತಿರ ಕಾಣಬಹುದು. ಬಂದ ಭಕ್ತರಿಗೆ ಬಾಬಾರ

ಮಹಿಮೆ ಅರಿಯಲು ಮತ್ತು ಇತರರಿಗೆ ಹೇಳಲು ಪ್ರೇರೇಪಿಸುತ್ತಿದ್ದರು.

'ಹರಿದ್ವಾರ, ಮಥುರಾ, ಕಾಶಿ, ಶಿರಡಿ ಮೆ ಬಾಬಾ ಸಮಾಯ ಹೈ' ಅನ್ನುತ್ತಿದ್ದರು. ನಾಲ್ಕು ಧಾಮಗಳು (ಹರಿದ್ವಾರ, ಮಥುರಾ, ಕಾಶಿ, ಶಿರಡಿ) ಇಲ್ಲೇ ಇವೆ ಎನ್ನುತ್ತಿದ್ದರು. ಸಾಯಿಯ ಚರಣಗಳಲ್ಲಿವೆ ಎಂದು ಹಾಡುತ್ತಿದ್ದರು.

## ಶಿವನೇಶನ್ ಸ್ವಾಮಿಗಳು ಸಂಪರ್ಕಿಸಿದ ಸಂತ ಮಹಾತ್ಮರು



**ನಿತ್ಯಾನಂದ ಸ್ವಾಮಿ ವಜ್ರೇಶ್ವರಿ**

ಇವರು ವಜ್ರೇಶ್ವರಿ ತಲುಪಿದಾಗ ನಿತ್ಯಾನಂದರು ಇವರನ್ನು ಶಿರಡಿಗೆ ಹೋಗಲು ಹೇಳಿದ್ದರು.



**ರಾಧಾಕೃಷ್ಣ ಸ್ವಾಮಿ**

ರಾಧಾಕೃಷ್ಣ ಸ್ವಾಮಿಗಳು ಇವರಿಗೆ ಶಿರಡಿ ಬಿಡಬೇಡವೆಂದು ಹೇಳಿದ್ದರು.



**ಉಪಾಸಿನಿಯವರ ಶಿಷ್ಯೆ ಗೋದಾವರಿ ಮಾತಾಜಿ**

ಸಕೋರಿಯ ಮಾತಾಜಿಯವರನ್ನು ಶಿರಡಿಯಲ್ಲಿ ಸಮಾಧಿ ಮಂದಿರಕ್ಕೆ ಕರೆದುಕೊಂಡು ಹೋಗುತ್ತಿದ್ದರು.



**ಮಾಯಮ್ಮ**

ಇವರ ಕೋಣೆಯಲ್ಲಿ ಅಮ್ಮ ಅವರ ಚಿತ್ರ ಇತ್ತು. ಬಂದ ಭಕ್ತರಿಗೆ ಅಮ್ಮನ ದರ್ಶನ ಮಾಡಲು ಹೇಳುತ್ತಿದ್ದರು.



**ನಾಮಪಲ್ಲಿ ಬಾಬಾ**


ಸಾಯಿ ಬಂಧುಗಳಿಗೆ ಹೈದರಾಬಾದ್‌ನ ನಾಮಪಲ್ಲಿ ಬಾಬಾರ ದರ್ಶನ ಮಾಡಲು ಹೇಳುತ್ತಿದ್ದರು.

**ಪರದಸಿಂಘದ ಅನಸೂಯಮಾತಾ**



ಬಂದ ಎಲ್ಲಾ ಸಾಯಿಬಂಧುಗಳಿಗೆ ಪರದ್ ಸಿಂಘಕ್ಕೆ ಹೋಗಿ ಅನಸೂಯ ಮಾತಾರನ್ನು ಭೇಟಿ ಮಾಡಿ ಆಶೀರ್ವಾದ ಪಡೆಯಲು ಹೇಳುತ್ತಿದ್ದರು.

**ಕರ್ನೂಲ ರಾಮರೆಡ್ಡಿ ತಾತಾ**



ಸ್ವಾಮಿಗಳಿಗೆ ಅವಧೂತರನ್ನು ಕಂಡರೆ ಭಯಭಕ್ತಿ ಬಹಳ. ಬಂದ ಸಾಯಿ ಬಂಧುಗಳಿಗೆ ಹೈದರಾ ಬಾದ್‌ನ ರಾಮರೆಡ್ಡಿ ತಾತಾರನ್ನು ಕಂಡು ಆಶೀರ್ವಾದ ಪಡೆಯಲು ತಿಳಿಸುತ್ತಿದ್ದರು.

**ದ್ವಾರಕಾಮಾಯಿ**



ಸ್ವಾಮಿಗಳು ನಲವತ್ತೈದು ವರ್ಷ ಶಿರಡಿ ಯಲ್ಲಿದ್ದರು. ಬಂದ ಭಕ್ತರಿಗೆ ಗುರುಸ್ಥಾನ ದ್ವಾರಕಾ ಮಾಯಿ ನಂದಾದೀಪದ ಮಹತ್ವ ತಿಳಿಸುತ್ತಿದ್ದರು. 'ಸಾಯಿ ಲೀಲಾ' ಪತ್ರಿಕೆಯನ್ನು ಬೇರೆ ಬೇರೆ ಭಾಷೆ ಗಳಿಗೆ ಭಾಷಾಂತರಿಸಲು ತಿಳಿಸುತ್ತಿದ್ದರು.



ಗುರುಸ್ಥಾನದ ಮುಂದೆ ಗುರುಗಳು ಕೂತಿರುತ್ತಿದ್ದರು. ಭಕ್ತಾದಿಗಳು ಊದುಗಡ್ಡಿ ಹಚ್ಚುವ ಸ್ಥಾನದಲ್ಲಿ ಗುರುವಾರ, ಶುಕ್ರವಾರ ಮಾನವ ಕೋಟಿಯ ಉದ್ಧಾರಕ್ಕಾಗಿ ತಮ್ಮ ಪ್ರಾರ್ಥನೆ ಸಲ್ಲಿಸುತ್ತಿದ್ದರು.

ಗುರುಸ್ಥಾನದ ಒಳಗೆ ಗುರೂಜಿ ಸಂಜೆ ಎಂಟು ಗಂಟೆಗೆ ಭಜನೆ ನಡೆಸುತ್ತಿದ್ದರು.

**ಹನುಮಾನ ಮಂದಿರ**



ಬಾಬಾ ಇದನ್ನು ತನ್ನ ಅಣ್ಣನ ಸ್ಥಾನ ಎಂದು ಕರೆಯುತ್ತಿದ್ದರು. ಹನುಮಂತನನ್ನು ಅಣ್ಣ ಎಂದೇ ಕರೆಯುತ್ತಿದ್ದರು.


ಮಂಗಳೂರಿನ ಮೋಹನ ಬಾಬಾ

ಗುರೂಜಿಗೆ ಅತ್ಯಂತ ನಿಕಟದವರು. ಮೋಹನ ಬಾಬಾ ಗುರೂಜಿಗೆ ಎಲ್ಲ ಕಾರ್ಯಗಳಲ್ಲೂ ಸಹಾಯ ಮಾಡುತ್ತಿದ್ದರು. ಇವರು ಕೊನೆಯುಸಿರವರೆವಿಗೂ ಶಿರಡಿ ವಾಸಿಯಾಗಿದ್ದರು. ಉಸಿರು ಹಿಡಿದು ಹನುಮಾನ ಚಾಲೀಸ ಸ್ತುತಿಸುತ್ತಿದ್ದರು.

ಮಣಿ ಎಂಬ ಸಾಯಿ ಭಕ್ತ ಮುಂಬಯಿನ ದರ್ಜಿ ಶಿರಡಿಯಲ್ಲಿ ನೆಲೆಸಿದ್ದರು. ಶಿವನೇಶನ್ ಸ್ವಾಮಿಗಳಿಗೆ ನಿಕಟವಾಗಿದ್ದರು.

ಸಿಯಾರಾಮ ಎಂ.ಪಿ.ಯಿಂದ ಶಿರಡಿಗೆ ಗುರೂಜಿ ಆದೇಶದ ಮೇಲೆ ಬಂದು ನೆಲೆಸಿದ್ದರು. ಗುರುಸ್ಥಾನ ಸಮಾಧಿ ಮಂದಿರ ಮತ್ತು ದ್ವಾರ್ಕಾಮಾಯಿಯ ಆರ್ಕಿಟಕ್ಚರ್ ಚೆನ್ನಾಗಿ ತಿಳಿದಿದ್ದರು. ಇವರು ವಿದ್ಯೆಯಲ್ಲಿ ಅಷ್ಟು ಮುಂದುವರಿಯಲಿಲ್ಲ. ಹನುಮಂತನ ಸೇವೆ ಇವರಿಗೆ ಆನಂದ. ಪೆರಿಯಾನಕಮಾಪಲ್ಯಂನ ಗುರುಸ್ಥಾನ ಇವರೇ ನಿರ್ಮಿಸಿದ್ದು. ಸಾವಿರಕ್ಕೂ ಹೆಚ್ಚು ಹನುಮಂತನ ಅಲಂಕಾರ ಏನೂ ಹಣ ತೆಗೆದುಕೊಳ್ಳದೆ ಅಲಂಕರಿಸುತ್ತಿದ್ದರು. ಒಂದು ಭೋಜನ ಶಾಲೆ ನಡೆಸುತ್ತಿದ್ದರು. ಭೋಜನಕ್ಕೆ ಬಡವರಿಂದ, ಫಕೀರರಿಂದ ಹಣ ತೆಗೆದುಕೊಳ್ಳುತ್ತಿರಲಿಲ್ಲ.

ಉಸಿರೆಳೆಯುವಾಗ 'ಸಾ' ಮತ್ತು ಉಸಿರು ಬಿಡುವಾಗ 'ಯಿ' ಧ್ಯಾನವಿರಲಿ. ದಿನದಲ್ಲಿ 26300 ಸಲ ಶ್ವಾಸ ತೆಗೆದುಕೊಳ್ಳುತ್ತೇವೆ. ಈ ಅಭ್ಯಾಸ ಮಾಡಿದರೆ ನಮಗೆ ಸಾಕ್ಷಾತ್ಕಾರ ಖಂಡಿತ ಆಗುವುದು ಎಂದು ಶಿವನೇಶನ್ ಸ್ವಾಮಿಗಳು ಹೇಳುತ್ತಿದ್ದರು.




13.3.2016 ರಲ್ಲಿ ಬೆಂಗಳೂರಿನ ಹೊರಗೆ ಕೇತು ಹಳ್ಳಿಯಲ್ಲಿ ಒಂದು ಹೊಸ ಮಂದಿರದ ಉದ್ಘಾಟನೆಯಾಯಿತು. ರಾಮೋಹಳ್ಳಿಯಿಂದ 3 ಕಿ.ಮೀ. ದೂರದಲ್ಲಿದೆ. ದೊಡ್ಡ ಆಲದಮರದ ಸಮೀಪವಿದೆ. ಕೆಂಗೇರಿ ನೆಲಮಂಗಲ ರಸ್ತೆಯ ಹತ್ತಿರ ಬರುವುದು. 70ರ ದಶಕದಲ್ಲಿ ಶಿರಡಿ ದ್ವಾರಕಾಮಾಯಿ ತರಹ ಕಂಡುಬರುವುದು. ಅಲ್ಲಿ ಶಿವನೇಶನ್ ಸ್ವಾಮೀಜಿಯವರ ಚಿತ್ರವಿದೆ. ಅವರನ್ನು ಚಾವಡಿ ಸ್ವಾಮೀಜಿ ಎಂದೂ ಕರೆಯಲಾಗುತ್ತಿತ್ತು.

ಬಾಬಾ ಶಿರಡಿಗೆ ಬಂದು ಮೊದಲು ಮಾಡಿದ ಪವಾಡ–ಧುನಿ

ಯನ್ನು ತಮ್ಮ ಯೋಗ ಬಲದಿಂದ ಹಚ್ಚಿಸಿದ್ದು! ಬಾಬಾ ಹಲವಾರು ರೀತಿಯಲ್ಲಿ ಔಷಧಿ ಕೊಡುತ್ತಿದ್ದರು. ಬಾಬಾ ಉಧಿ ನೀಡಿ ಗುಣಪಡಿಸಿದ ಕಥೆಗಳು ಗಣಿಸಲಸಾಧ್ಯ. ಅಪ್ಪಾಭಿ ಕೊಟ್ಟ ಸೌದೆಯಲ್ಲಿ ಅರ್ಧ ಧುನಿಗೆ ಇರುತ್ತಿತ್ತು.

1952ರ ನಂತರ ಶಿವನೇಶನ್ ಸ್ವಾಮೀಜಿ ಚಾವಡಿಯಲ್ಲಿರುತ್ತಿದ್ದರು. 1984ರಲ್ಲಿ ಭಕ್ತರಿಗೆ ಧುನಿ ಪೂಜೆ ಮಾಡಲು ಬಿಟ್ಟರು. ಆದರೆ ಸಂಸ್ಥೆ ಅಧಿಕಾರಿಗಳು ಆಕ್ಷೇಪಣೆ ತೆಗೆಯಲು ಆ ಕ್ರಮ ನಿಲ್ಲಿಸಬೇಕಾಯಿತು.ಈಗ ಭಕ್ತರು ತೆಂಗಿನ ಕಾಯಿ ಶಾಸ್ತ್ರಿಗಳಿಗೆ ನೀಡಿ ನಂತರದಲ್ಲಿ ಅದನ್ನು ಪೂಜೆಗೆ ಉಪಯೋಗಿಲಾಗುವುದು. 2000ರ ನಂತರ ಭಕ್ತರು ಪೂಜೆ ಮಾಡುವ ಹಾಗಿಲ್ಲ.

ಸ್ವಾಮಿಗಳು ಸಾಯಿ ಮಂದಿರವಿರುವ ಕಡೆಗಳಲ್ಲೆಲ್ಲಾ ಧುನಿ ಸ್ಥಾಪಿಸಲು ಹೇಳುತ್ತಿದ್ದರು. ಈಗ ಕೇತೋಹಳ್ಳಿಯಲ್ಲೂ ಉತ್ತಮವಾದ ಧುನಿಯಿದೆ ಯೆಂದರೆ ಅದು ಸ್ವಾಮಿಗಳ ಆಶೀರ್ವಾದವಲ್ಲದೆ ಇನ್ನೇನು?!

ಬಾಬಾ ಧುನಿ ನಡೆಸುತ್ತಿದ್ದ ಉದ್ದಿಶ್ಯ ಭಕ್ತರು ತಮ್ಮ ನಕಾರಾತ್ಮಕ ಶತ್ರುಗಳನ್ನು ಸುಡಲಿ ಎಂದು. ಅವನ್ನು ಸುಟ್ಟಾಗ ಆ ಬೂದಿಗೆ ಅಪಾರ ಶಕ್ತಿ ಇರುವುದು, ಆ ಶಕ್ತಿಯೇ ನಮ್ಮ ಯಶಸ್ಸಿಗೆ ಕಾರಣವಾಗುವುದು.

ಒಮ್ಮೆ ಬಾಬಾರ ಸಮಯದಲ್ಲಿದ್ದ ಫಕೀರ ತೇಜುದ್ದೀನ ಬಾಬಾರ ಮಸೀದಿಗೆ ಬೆಂಕಿ ತಗಲಿತ್ತು. ಬಾಬಾ ಆ ಸಮಯ ತಮ್ಮ ಕೈನ ಮೇಲಿಂದ ಕೆಳಗೆ ಆಡಿಸುತ್ತಿದ್ದರು. ಪಕ್ಕದಲ್ಲಿದ್ದ ಭಕ್ತರು ಬಾಬಾರನ್ನು ಏನಾಯಿತೆಂದು ಕೇಳಲು ಬಾಬಾ ತೇಜುದ್ದೀನ ಮಸೀದಿಯಲ್ಲಿ ಬೆಂಕಿ ಬಿದ್ದಿದೆ. ಅದನ್ನು ಆರಿಸುತ್ತಿದ್ದೇನೆ ಎಂದರು.

ಮಾರನೆ ದಿನ ಫಕೀರರಿಂದ ತಿಳಿದುಬಂದಿತು 'ನಮ್ಮ ಮಸೀದಿಗೆ ಬೆಂಕಿ ತಗಲಿತ್ತು. ಬಾಬಾರನ್ನು ನೆನೆಸಿಕೊಳ್ಳಲು ಆದು ತಕ್ಷಣ ಆರಿತು' ಎಂದು!

ಒಮ್ಮೆ ಒಬ್ಬ ಕುಂಬಾರನ ಹೆಂಡತಿಯ ಅಚಾತುರ್ಯದಿಂದ ಮಗು ಒಲೆಯಲ್ಲಿ ಬೀಳುವುದನ್ನು ಬಾಬಾ ಧುನಿಯಲ್ಲಿ ಕೈಯಿಟ್ಟು ಸುಟ್ಟುಕೊಂಡು ಮಗುವನ್ನು ರಕ್ಷಿಸಿದ್ದರು.

ದ್ವಾರಕಾಮಾಯಿಯ ಧುನಿ ನಮ್ಮೆಲ್ಲರ ತಾಯಿ ಎನ್ನುತ್ತಿದ್ದರು ಬಾಬಾ. ವಿಷ್ಣು ಇಲ್ಲಿಯ ರಕ್ಷಕ ಉಧಿ ಅವನ ಪ್ರಸಾದ ಎನ್ನುತ್ತಿದ್ದರು. ಅಲ್ಲಿಯ ಉಧಿ ತಾಯತ ಇದ್ದಹಾಗೆ ಎಲ್ಲರನ್ನೂ ರಕ್ಷಿಸುವುದು ಎನ್ನುತ್ತಿದ್ದರು.

ಉಧಿಯಿಂದ ನಾವು ಏನು ತಿಳಿಯಬೇಕೆಂದರೆ ವಿಶ್ವದಲ್ಲಿ ಕಾಣುವುದೆಲ್ಲಾ ಮಾಯೆಯ ಆಟ. ಅದಕ್ಕೆ ಬೆರಗಾಗಿ ಮನಸ್ಸು ಸೋಲದಂತಿರಿ. ಅದರ ಆಸೆ ಸುಟ್ಟುಹಾಕಿದಾಗ ನಿಮ್ಮ ಚಿತ್ತ ಮಾಯಾ ರಹಿತ ರಾಮನ ಕಡೆಗೆ ಒಲವು ಬೀರುವುದು ಎನ್ನುತ್ತಿದ್ದರು.  ಉಧಿ ಪವಿತ್ರ ಮತ್ತು ಶಕ್ತಿಭರಿತ ಅದರಿಂದಾಗದ ಕೆಲಸವಿಲ್ಲ.

ಭಕ್ತರೇ ಕೇತುಹಳ್ಳಿಗೆ ಬಂದು ಬಾಬಾರಲ್ಲಿ ವಿಲೀನರಾಗಿ ನಿಮ್ಮನ್ನು ನೀವು ಮರೆತುಬಿಡಿ, ಅದೇ ನಿಮಗೆ ಮುಕ್ತಿದಾಯಕ.

**ಮಂದಿರಗಳ ಟ್ರಸ್ಟೀಗಳಿಗೆ ಪೂಜಾರಿಗಳಿಗೆ ಕಾರ್ಯಕರ್ತರಿಗೆ ಆದೇಶ**

ಮಂದಿರಗಳ ಜವಾಬ್ದಾರಿ ಹೊತ್ತಿರುವ ಅಧ್ಯಕ್ಷರೆ, ಕಾರ್ಯದರ್ಶಿಗಳೆ, ಪೂಜಾರಿಗಳೆ,  ಬಂದ ಭಕ್ತರಿಗೆ ತಮ್ಮ ಸೇವೆ ಸಲ್ಲಿಸಲು ಅವಕಾಶ ಪ್ರೀತಿಯಿಂದ ಮಾಡಿಕೊಡಿ. ಅವರಿಗೆ ನಿಮ್ಮ ಬಾಹುಬಲ ತೋರಿಸಬೇಡಿ. ನೀವು ಸೇವಕರು. ಇಲ್ಲಿಯ ಯಜಮಾನರಲ್ಲ. ಭಕ್ತ ಲಕ್ಷ ದಾನ ನೀಡುವ ಸಾಹುಕಾರನೇ ಆಗಲಿ ಭಿಕ್ಷೆಬೇಡುವ ಫಕೀರನೇ ಆಗಲಿ ತಮ್ಮ ತಂದೆಯಾದ ಬಾಬಾರನ್ನು ಕಾಣಲು ಬರುತ್ತಾರೆ. ಅವರಲ್ಲಿ ಯಾವ ಭೇದವನ್ನೂ ನೋಡಬೇಡಿ. ಯಾರೊಬ್ಬರಿಗೂ ಉನ್ನತ ದೃಷ್ಟಿಯಲ್ಲಿ ಅಥವಾ ನಿಕೃಷ್ಟರೀತಿ ನೋಡಬೇಡಿ. ಸಾಯಿನಾಥ ಅವರನ್ನು ಕಾಣುವಂತೆ ನೀವೂ ಕಾಣಿ.

ಅವರಿಗೆ ಬೇಕಾದ ಸಹಕಾರ ನೀಡಿ ಅಧಿಕಾರಿಗಳ ಹಾಗೆ ವರ್ತಿಸಬೇಡಿ.

ಬಂದವರ ಮೇಲೆ ಪ್ರೇಮ ಭಾವವಿರಲಿ ಯಾರನ್ನೂ ದ್ವೇಷಿಸುವ ಭಾವ ಬರದೆ ಇರಲಿ. ಎಲ್ಲರಿಗೂ ಪ್ರಾಪಂಚಿಕ ತೊಂದರೆಗಳಿರಬಹುದು. ಅದನ್ನು ಅರ್ಥಮಾಡಿಕೊಳ್ಳಬೇಕು. ಅವರು ಉದ್ವೇಗದಲ್ಲಿರಬಹುದು. ಬಂದ ಭಕ್ತರು ಏನೇ ತರಲಿ ಬಿಡಲಿ ಅವರಿಗೆ ಬಾಬಾರ ಪ್ರಸಾದ ಹೂವಿನ ರೂಪದಲ್ಲಿ ಪ್ರೇಮದ ರೂಪದಲ್ಲಿ ಒದಗಿಸಿ. ಅದರಲ್ಲಿ ಭಕ್ತರಿಗೆ ಯಾವ ವಂಚನೆಯೂ ಆಗದಿರಲಿ. ಅಧಿಕಾರದಲ್ಲಿರುವವರು ಮೊದಲು ಪ್ರಾಥಮಿಕ ಭಕ್ತರಾಗಿ ವರ್ತಿಸಬೇಕು.

ನಮ್ಮ ದೈನಂದಿಕ ಜೀವನದಲ್ಲಿ ನಮ್ಮಲ್ಲಿರುವ ದೇಹ ಭಾವ ಅಹಂಕಾರ ರೂಪದಲ್ಲಿ ನಮ್ಮನ್ನು ಆಳುವುದು. ಅದಕ್ಕೆ ಮಂದಿರದೊಳಗೆ ಅವಕಾಶ ಮಾಡಲು ಬಿಡಬೇಡಿ.

ಮಂದಿರದಲ್ಲಿರುವ ಶಾಂತ ವಾತಾವರಣ ಯಾವ ಕಾರಣಕ್ಕೂ

ಕುಲಷಿತವಾಗದಿರಲಿ. ನಮ್ಮ ಅಹಂಕಾರ ಯಾರಿಗೂ ನೋವು ಕೊಡದಂತೆ ವರ್ತಿಸಿ. ಕಷ್ಟದ ಸಮಯದಲ್ಲಿ ನಮ್ಮಲ್ಲಿರುವ ಸೈರಣೆ ನಮಗೆ ಮುಂದೆ ಶಕ್ತಿಯಾಗಿ ಬರುವ ತೊಂದರೆಗಳನ್ನು ಎದುರಿಸುವಂತೆ ಮಾಡುವುದು. ಸಾಯಿಚರಿತ್ರೆಯಲ್ಲಿ ನಮ್ಮ ಜೀವನಕ್ಕೆ ಬೇಕಾಗುವ ಶಾಂತಿಪಾಠಗಳು ಹೇಳಲಾರದಷ್ಟಿವೆ. ಸಾಯಿ ಚರಿತ್ರ, ರಾಮಾಯಣ, ಮಹಾಭಾರತ ಮತ್ತು ಬೈಬಲ್‌ಗಳಂತೆ ಪವಿತ್ರ ಗ್ರಂಥ. ಅದು ಬಾಬಾರ ಆದೇಶದಂತೆ ರಚಿತ ವಾಗಿದೆ. ಇದರಲ್ಲಿರುವ ಒಂದೊಂದು ಮಾತೂ ಸತ್ಯ.

ಸಾಯಿ ಚರಿತ್ರೆ ರಹಸ್ಯ ಹೀಗಿದೆ. ಇದರಲ್ಲಿ ಮೊದಲು 52 ಅಧ್ಯಾಯಗಳಿದ್ದವು. ದೇವಬಾಬಾ 53ನೆಯದನ್ನು ಅಧ್ಯಾಯ ಸೂಚಿಯಾಗಿ ರಚಿಸಿದರು. 52ರ ಅರ್ಥ 52 ವಾರಗಳು ಅಂದರೆ ಐದು ಎರಡು ಸೇರಿ ಏಳಾಗುತ್ತೆ. ಅದು ಏಳು ದಿನಗಳು, 52 ವಾರಗಳು ಇವೆಲ್ಲ ಎಂದಿಗೂ ಮುಗಿಯದ್ದು. ಏಳು ಋಷಿಗಳು, ಏಳು ನದಿಗಳು, ಏಳು ಖಂಡಗಳು, ಏಳು ಸ್ವರಗಳು, ಹಾಗೆಯೆ 52 ಆಧ್ಯಾಯಗಳು ಎಂದರೆ ಎಂದಿಗೂ ಮುಗಿಯದ್ದು. ಇದನ್ನು ಒಮ್ಮೆ ಓದಿ ಪುಸ್ತಕ ಎತ್ತಿಡುವುದಲ್ಲ. ನಿರಂತರ ಪಾರಾಯಣ ಆಗುತ್ತಿರಬೇಕು. ಅದೇ ಜೀವನ. ಹದಿನಾರನೆ ಶತಮಾನದಲ್ಲಿ ರಚಿತವಾದ ರಾಮಾಯಣ ಜನಗಳ ಉಸಿರಾಗಿದೆ. ಹಾಗೆಯೆ ಸಾಯಿ ಚರಿತ್ರ ನಮ್ಮ ಜೀವನದ ಉಸಿರಾಗಬೇಕು. ಕೆಲವರು ಚಕಾರ ವೆತ್ತಿರಬಹುದು. ಅದನ್ನು ಗಣನೆಗೆ ತಂದುಕೊಳ್ಳದೆ ಇದನ್ನು ಪವಿತ್ರ ಗ್ರಂಥವೆಂದು ತಿಳಿದು ಅವಗುಣಗಳ ಬಗ್ಗೆ ಚರ್ಚೆಮಾಡುತ್ತ ನಮ್ಮ ಜೀವನ ವ್ಯರ್ಥವಾಗುವುದು ಬೇಡ. ಸಂಪೂರ್ಣ ಶ್ರದ್ಧೆಯಿಂದ ದಿನ ನಿತ್ಯವೂ ಪಠಿಸುತ್ತ ನಮ್ಮ ಜೀವನ ಸಾರ್ಥಕ ಮಾಡಿಕೊಳ್ಳೋಣ.

**ಓಂ ಸಾಯಿರಾಂ**



ಶ್ರೀ ನರಸಿಂಹ ಸ್ವಾಮಿಜಿ



ಶ್ರೀ ರಾಧಾಕೃಷ್ಣ ಸ್ವಾಮಿಜಿ



ಶ್ರೀ ಶಿವನೇಶನ್ ಸ್ವಾಮಿಜಿ

ವಾಸ್ತವವಾಗಿ ಇಂದು ಶ್ರೀ ಸಾಯಿಬಾಬಾ ಅವರ ಹೆಸರನ್ನು ಕೇಳದವರಿಲ್ಲ! ಆದರೆ ದೀರ್ಘಕಾಲದವರೆಗೂ ಈ ಸಂತರ ಹೆಸರು ಅಜ್ಞಾತವಾಗಿತ್ತು. ಭಕ್ತಗಣಕ್ಕೆ ಈ ಮಹಾತ್ಮನನ್ನು ಪರಿಚಯಿಸಿದ ಪುಣ್ಯವು ಶ್ರೀ ನರಸಿಂಹಸ್ವಾಮಿಜಿ, ಶ್ರೀ ರಾಧಾಕೃಷ್ಣ ಸ್ವಾಮಿಜಿ ಹಾಗೂ ಶ್ರೀ ಶಿವನೇಷನ್ ಸ್ವಾಮಿಜಿ ಈ ಮೂರು ಮಹಾನ್ ಭಕ್ತರಿಗೆ ಸೇರತಕ್ಕದ್ದು. ಇವರಿಂದಾಗಿ ಶ್ರೀ ಬಾಬಾ ಅವರ ಹೆಸರು ಇಂದು ಜಗತ್ತಿನಾದ್ಯಂತ ಭಕ್ತರ ಮನೆಗಳಲ್ಲಿ, ಮನಗಳಲ್ಲಿ ನೆಲೆಸುವಂತಾಯಿತು. ಈ ಕಾರ್ಯಕ್ಕಾಗಿ ಈ ತ್ರಿಮೂರ್ತಿಗಳು, ತಮ್ಮ ಇಡೀ ಜೀವನವನ್ನೇ ಮುಡುಪಾಗಿಟ್ಟು, ಮೌನವಾಗಿ ಶ್ರಮಿಸಿದರು. ಸಾಯಿಬಾಬ ಅವರ ಆಧ್ಯಾತ್ಮಿಕ ಸಾಧನೆಗಳನ್ನು ಚೆನ್ನಾಗಿ ಬಲ್ಲವರು ಕೂಡ ಈ ಮೂವರು ಸಾಧಕರ ಬಗ್ಗೆ ಕೇಳಿಲ್ಲವೆಂದರೆ ಅವರ ಸ್ವಭಾವವನ್ನು ಊಹಿಸಬಹುದಾಗಿದೆ!


ಪ್ರಕಾಶಕರು

**ಕೇತುಹಳ್ಳಿ ದ್ವಾರಕಾಮಾಯಿ ಸಾಯಿಮಂದಿರ**

ಬೆಂಗಳೂರು.

ಮೊ: 9844477777 / 9449951464